# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಜುಲೈ 2024
ಸಂಪುಟ 20 ಸಂಚಿಕೆ 07

ಸಂಚಿಕೆ ಬೆಲೆ ರೂ. 1/-

info@buntsanghablr.com
buntsanghabangalore@yahoo.in






International Yoga Day celebrations at BSRNSV





Investiture Program




PU students orientation program

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

#324, Bunt's Sangha Complex
Chord Road, Vijayanagar
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಬಂಟರ ಸಂಘ ಬೆಂಗಳೂರು

## ಚುನಾವಣೆ 2024-26

PLEASE SUPPORT
TEAM
CA ASHOK
SHETTY



## ಸಿಎ ಅಶೋಕ್ ಶೆಟ್ಟಿ ಎಂ

**28**
JULY 2024
SUNDAY

CL002080

ಈ ವರ್ಷ ನಡೆಯುವ ಬಂಟರ ಸಂಘ ಬೆಂಗಳೂರು ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾದ ನಾನು, ವಿನೀತ ಮತ್ತು ವಿನಮ್ರನಾಗಿ ಸಮಾಜ ಬಾಂಧವರಲ್ಲಿ ನನ್ನ ಕಿರು ಪರಿಚಯ ಮಾಡಿಕೊಳ್ಳುತ್ತಿದ್ದೇನೆ.

- ಕಾರ್ಕಳ ಮುದ್ರಾಡಿ ಸಂಬೆಟ್ಟು ಶೀನಪ್ಪ ಶೆಟ್ಟಿ ಮತ್ತು ಮುಲ್ಲಾಡ್ ಲಕ್ಷ್ಮೀ ಶೆಡ್ತಿ ಅವರ ಕಿರಿಯ ಪುತ್ರನಾಗಿ ಜನನ.
- **ವಿದ್ಯಾಭ್ಯಾಸ:** ಚಾರ್ಟರ್ಡ್ ಅಕೌಂಟೆಂಟ್.
- **ವ್ಯವಹಾರ :** ಎಮ್ ಎ ಎಸ್ & ಕೋ ಯನ್ನು ಸ್ಥಾಪಿಸಿ, 30 ವರ್ಷಗಳ ಕಾಲ ವಿವಿಧ ಸಂಸ್ಥೆಗಳು ಮತ್ತು ಬ್ಯಾಂಕುಗಳಲ್ಲಿ ಲೆಕ್ಕ ಪರಿಶೋಧಕನಾಗಿ ಅನುಭವ.
- ರಾಜ್ಯ ಒಕ್ಕಲಿಗರ ಸಂಘ, ಸಪ್ತಗಿರಿ ಹಾಗೂ ಕಿದ್ವಾಯಿ ಆಸ್ಪತ್ರೆಗಳಂತಹ, ಸ್ಕೂಲ್, ಕಾಲೇಜು, ಹಾಸ್ಟೆಲ್ ಗಳ ಲೆಕ್ಕ ಪರಿಶೋಧಕನಾಗಿ ಅನುಭವ.
- **ಬಂಟರ ಸಂಘದ ಒಡನಾಟ:**

  1994-2008-ಆಂತರಿಕ ಲೆಕ್ಕ ಪರಿಶೋಧಕ.

  2010-2014- ಎರಡು ಅವಧಿಗೆ ಕಾರ್ಯಕಾರಿ ಸಮಿತಿ ಸದಸ್ಯ .

  2022- 2024- ಹಣಕಾಸು ಸಮಿತಿ ಸದಸ್ಯ .
- ಸಮಾಜ ಮುಖಿ ಚಟುವಟಿಕೆಗಳು :

  ಕಾರ್ಯದರ್ಶಿ ಹಾಗೂ ಅಧ್ಯಕ್ಷ Lions club ಜಯಮಹಲ್

  2018-24- ಕೋಶಾಧಿಕಾರಿ, ಲಯನ್ಸ್ ವ್ರಧ್ಧಾಶ್ರಮ ಸೇವಾ ಸಂಸ್ಥೆ.

  2022-2025- ಖಜಾಂಚಿ – ವೈಟ್ ಫೀಲ್ಡ್ ಎಕ್ಸಪೋರ್ಟ್ ಪ್ರೊಮೋಶನ್ ಪಾರ್ಕ್ ಇಂಡಸ್ಟ್ರಿಯಲ್ ಅಸೋಸಿಯೇಷನ್.
- **ಇತರ ಸೇವಾ ಚಟುವಟಿಕೆಗಳು**

  2020 ರಲ್ಲಿ ಸ್ವಯಂಸೇವಕನಾಗಿ 25000 ಆಹಾರದ ಕಿಟ್ ವಿತರಣೆಯಲ್ಲಿ ಸಹಾಯ.

  2021ರಲ್ಲಿ ಕೋವಿಡ್ ಕೇರ್ ಸೆಂಟರ್ ನಡೆಸಿದ ಅನುಭವ.

  2022 ರಲ್ಲಿ ರಾಮ ಮಂದಿರಕ್ಕಾಗಿ 2.5ಕೋಟಿಗೂ ಅಧಿಕ ಹಣ ಸಂಗ್ರಹ.

  2016-24 – ಮುಲ್ಲಾಡ್ ಸರ್ಕಾರಿ ಶಾಲೆಯ ಪುನರ್ ನಿರ್ಮಾಣ ಮತ್ತು ನಡೆಸಲು ಸಹಾಯ.

  **ವ್ಯಾಪಕ ಆಡಳಿತಾತ್ಮಕ ಮತ್ತು ಆಡಿಟಿಂಗ್ ಅನುಭವವಿರುವ ನಾನು ಬಂಟರ ಸಂಘವನ್ನು ಇನ್ನೂ ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯಲು ಉತ್ಸುಕನಾಗಿದ್ದೇನೆ.**

| ಕ್ರ. ಸಂಖ್ಯೆ | ಅಭ್ಯರ್ಥಿಯ ಹೆಸರು | | |
|---|---|---|---|
| 1 | ಸಿಎ ಅಶೋಕ್ ಶೆಟ್ಟಿ ಎಂ.<br>CA ASHOK SHETTY M. |  | VOTE |

ನಿಮ್ಮವನಾದ

**ಸಿಎ ಅಶೋಕ್ ಶೆಟ್ಟಿ ಎಂ**

**TEAM CA ASHOK SHETTY**

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

**VOL 20** **JULY 2024** **ISSUE 07**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.
**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.
**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ
**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್. ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ
**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಸಂಘದ ಚುನಾವಣೆ – ಅಭ್ಯರ್ಥಿಗಳ ಅಂತಿಮ ಪಟ್ಟಿ | 7 |

**ಮುಖ ಪುಟ**

**International Yoga Day celebration at BSRNSV**
**Investiture Program**
**PU students orientation program**

# ಸಂಪಾದಕೀಯ



## ಪ್ರಾಮಾಣಿಕತೆ

ಒಂದು ಒಳ್ಳೆಯ ಮಾತು ದ್ವೇಷವನ್ನು ಕೊನೆಗಾಣಿಸುತ್ತದೆ. ಹಾಗೆಯೇ ಒಂದು ಒಳ್ಳೆಯ ಮನಸ್ಸು ಸಂಬಂಧಗಳನ್ನು ಕಾಪಾಡುತ್ತದೆ. ಒಂದು ಪ್ರಾಮಾಣಿಕ ವ್ಯಕ್ತಿತ್ವ ಜೀವನವನ್ನೇ ಬದಲಾಯಿಸುತ್ತದೆ. ಹೌದು, ಪ್ರಾಮಾಣಿಕತೆಯು ಎಲ್ಲಾ ಯಶಸ್ಸಿನ ಮೂಲಾಧಾರವಾಗಿದೆ, ಅದು ಇಲ್ಲದೇ ಆತ್ಮವಿಶ್ವಾಸ ಮತ್ತು ಕಾರ್ಯಕ್ಷಮತೆಯ ಸಾಮರ್ಥ್ಯವು ಅಸ್ತಿತ್ವದಲ್ಲಿಲ್ಲ. ಪ್ರಾಮಾಣಿಕತೆಯು ವ್ಯಕ್ತಿಯ ಶ್ರೇಷ್ಠ ಗುಣಗಳಲ್ಲಿ ಒಂದಾಗಿದೆ. ಪ್ರಾಮಾಣಿಕತೆಯ ಬದುಕು ಕಷ್ಟವಾದರೂ ಅಸಾಧ್ಯವಾದುದಲ್ಲ. ಸುಳ್ಳಿನ ಟೊಳ್ಳು ಮಹಲನ್ನು ಕಟ್ಟಿ ಬದುಕುವುದಕ್ಕಿಂತ ಸತ್ಯದ ಗುಡಿಸಲಿನಲ್ಲಿ ಬದುಕಿದರೆ ಅದು ನೆಮ್ಮದಿಯ ಜೀವನವಾಗುತ್ತದೆ.

ಸತ್ಯವನ್ನು ಒಪ್ಪಿಕೊಳ್ಳಲು ಶಕ್ತಿ ಮತ್ತು ಧೈರ್ಯ ಬೇಕು. ಆಧುನಿಕ ಪ್ರಪಂಚವು ಮೋಸಗಾರರಿಂದ ತುಂಬಿದೆ ಮತ್ತು ಅವರ ವಿರುದ್ಧ ನಿಲ್ಲುವುದು ಎಂದಿಗೂ ಸುಲಭದ ಕೆಲಸವಲ್ಲ. ಆದರೆ ಸತ್ಯ ಯಾವಾಗಲೂ ಜೀವಂತವಾಗಿಯೇ ಇರುತ್ತದೆ. ಪ್ರಾಮಾಣಿಕ ವ್ಯಕ್ತಿಗೆ ಮಾತ್ರ ತನ್ನ ಆಪ್ತರು ಮಾಡಿದ ತಪ್ಪುಗಳನ್ನು ಗುರುತಿಸಲು ಮತ್ತು ಸರಿಪಡಿಸಲು ಸಾಧ್ಯವಾಗುತ್ತದೆ.

ಪ್ರಾಮಾಣಿಕ ವ್ಯಕ್ತಿ ಜೀವನದಲ್ಲಿ ಯಾವಾಗಲೂ ನೇರವಾಗಿರುತ್ತಾರೆ ಮತ್ತು ಜೀವನದಲ್ಲಿ ತೊಂದರೆಗಳನ್ನು ಎದುರಿಸಲು ಪ್ರಾಮಾಣಿಕತೆ ಮತ್ತು ಪ್ರಾಮಾಣಿಕತೆಯ ಬೆಂಬಲವನ್ನು ಮಾತ್ರ ಬಳಸುತ್ತಾರೆ. ಪ್ರಾಮಾಣಿಕತೆಯು ವ್ಯಕ್ತಿಯ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಬಲಪಡಿಸುತ್ತದೆ. ಪ್ರಾಮಾಣಿಕನಾದ ವ್ಯಕ್ತಿಯು ತಾನು ಮಾಡುವ ಕಾರ್ಯಗಳ ಪರಿಣಾಮಗಳಿಗೆ ಎಂದಿಗೂ ಹೆದರುವುದಿಲ್ಲ. ಪರಿಣಾಮವಾಗಿ ಅವರು ಮನಸ್ಸಿನ ಶಾಂತಿಯ ಸ್ಥಿತಿಯನ್ನು ಆನಂದಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ಅಪ್ರಾಮಾಣಿಕ ವ್ಯಕ್ತಿಯು ಸತ್ಯದ ಬಹಿರಂಗಕ್ಕೆ ಹೆದರುತ್ತಾನೆ ಮತ್ತು ಒತ್ತಡದ ಜೀವನವನ್ನು ನಡೆಸುತ್ತಾನೆ. ಯಾವ ವ್ಯಕ್ತಿಯು ತನ್ನ ನಿವೃತ್ತಿಯ ನಂತರ ನೆಮ್ಮದಿಯಿಂದ ಇರುತ್ತಾರೋ ಅವರು ತನ್ನ ವೃತ್ತಿಯಲ್ಲಿ ಅತ್ಯಂತ ಪ್ರಾಮಾಣಿಕವಾಗಿದ್ದರು ಎಂದರ್ಥ.

ಪ್ರಾಮಾಣಿಕತೆ ಒಂದೇ ಈ ಕಲಿಯುಗದಲ್ಲಿ ಆತ್ಮವಿಶ್ವಾಸದಿಂದ ಬದುಕಲು ಬಿಡುವುದು. ಅದಕ್ಕೆ ಒಂದು ಗಾದೆ ಮಾತಿದೆ– ಕಣ್ಣಾರೆ ಕಂಡರೂ ಪ್ರಮಾಣಿಸಿ ನೋಡು. ಯಶಸ್ವಿ ವ್ಯಕ್ತಿಯಾಗಲು ಪ್ರಾಮಾಣಿಕತೆಯ ಗುಣ ಬಹಳ ಅಗತ್ಯ. ಪ್ರಭು ಶ್ರೀ ರಾಮಚಂದ್ರನು ಪ್ರಾಮಾಣಿಕನಾಗಿದ್ದು, ಜೀವನದ ಎಲ್ಲಾ ಕಾಲದಲ್ಲೂ ನಿಷ್ಠೆಯಿಂದ ಇದ್ದುದ್ದರಿಂದಲೇ ಇಂದು ನಮಗೆಲ್ಲಾ ಭಗವಂತನಾದ. ನಾವು ಯಶಸ್ವಿಯಾದ ಯಾವ ವ್ಯಕ್ತಿತ್ವವನ್ನು ಗಮನಿಸಿದರೂ, ಅವರು ತಮ್ಮ ಬದುಕಿನುದ್ದಕ್ಕೂ ಪ್ರಾಮಾಣಿಕತೆಯನ್ನೇ ಅಸ್ತ್ರವಾಗಿಸಿಕೊಂಡವರು ಎಂಬುದು ನಮಗೆ ಅರಿವಾಗುತ್ತದೆ. ಅಪ್ರಾಮಾಣಿಕತೆ ಎನ್ನುವುದು ಮಡಿಲಿನಲ್ಲಿ ಕಟ್ಟಿಕೊಂಡ ಕೆಂಡದಂತೆ. ಯಾವ ಕ್ಷಣದಲ್ಲಿ ಬೇಕಾದರೂ ಜೀವನ ಸುಡಬಹುದು. ಇದಕ್ಕೆ ಉದಾಹರಣೆಯಾಗಿ ಇತ್ತೀಚಿನ ದಿನಗಳಲ್ಲಿ ನಾವು ಹಲವಾರು ಘಟನೆಗಳನ್ನು ನೋಡುತ್ತಿರುತ್ತೇವೆ.

ನಾವು ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ನಮ್ಮ ಮನೆಯಿಂದ ಪ್ರಾರಂಭವಾಗಿ, ಸ್ನೇಹಿತರು ಮತ್ತು ಶಿಕ್ಷಕರಿಂದ ಕಲಿಯುತ್ತೇವೆ. ಹಾಗೆಯೇ ಮಕ್ಕಳಲ್ಲೂ ಅದರ ಬೀಜವನ್ನು ಬಿತ್ತಿದರೆ ಉತ್ತಮ ಸಂಸ್ಕಾರವುಳ್ಳ ಪ್ರಜೆಗಳಾಗುತ್ತಾರೆ. ಜೀವನದಲ್ಲಿ ಪ್ರಾಮಾಣಿಕತೆಯ ಅತ್ಯುತ್ತಮ ಗುಣಗಳೆಂದರೆ ಉತ್ತಮ ನಡತೆ, ಶಿಸ್ತು ಮತ್ತು ನೀತಿವಂತ ನಡವಳಿಕೆಗಳು. ಆದ್ದರಿಂದ ನಮ್ಮ ಜೀವನದಲ್ಲಿ ಇದ್ದಷ್ಟೂ ದಿನ ಯಾವಾಗಲೂ ಪ್ರಾಮಾಣಿಕರಾಗಿರಲು ಪ್ರಯತ್ನಿಸೋಣ.

ಅರವಿಂದ ಶೆಟ್ಟಿ ಎಂ.

# ಅಧ್ಯಕ್ಷರ ಮಾತು



ಬೆಂಗಳೂರು ಬಂಟರ ಸಂಘದ 2022-24ರ ಸಾಲಿನ ಆಡಳಿತ ಮಂಡಳಿಯ ಅವಧಿಯು ಈ ತಿಂಗಳ ಕೊನೆಯಲ್ಲಿ ಮುಗಿಯಲಿದ್ದು, ಇದೇ ತಿಂಗಳ 27 ರಂದು ವಾರ್ಷಿಕ ಮಹಾಸಭೆ ಹಾಗೂ 28 ನೇ ತಾರೀಖಿನಂದು ಮುಂಬರುವ ಆಡಳಿತ ಮಂಡಳಿಯ ಚುನಾವಣೆ ನಡೆಯಲಿದ್ದು, ಸರ್ವ ಸದಸ್ಯರೆಲ್ಲರೂ ಇದರಲ್ಲಿ ಭಾಗಿಯಾಗಬೇಕೆಂದು ವಿನಂತಿಸುತ್ತೇನೆ.

ಸಾಮಾನ್ಯವಾಗಿ ಚುನಾವಣೆಗಳಲ್ಲಿ ಯಾರನ್ನು ಆರಿಸಬೇಕೆಂಬುದು ಎಲ್ಲರಲ್ಲೂ ಕುತೂಹಲವಿರುತ್ತದೆ. ಉದಾಹರಣೆಗೆ ನಮ್ಮ ಸಂಘದ ಬಗ್ಗೆ ಹೇಳುವುದಾದರೆ ಅನೇಕ ಗೌರವಾನ್ವಿತ ಸದಸ್ಯರು ಚುನಾವಣೆಯ ಕಣದಲ್ಲಿದ್ದು, ದಿನಂಪ್ರತಿ ಸೋಷಿಯಲ್ ಮೀಡಿಯಾ, ವಾಟ್ಸಪ್, ಮೊಬೈಲ್ ಕರೆಗಳ ಮುಖಾಂತರ ಸದಸ್ಯರನ್ನು ಒಟಿಗಾಗಿ ಸಂಪರ್ಕಿಸುತ್ತಿರುವುದನ್ನು ನಾವೆಲ್ಲರೂ ದಿನನಿತ್ಯ ನೋಡುತ್ತಿರುತ್ತೇವೆ. ಆದ್ದರಿಂದ ಯಾರಿಗೆ ಮತ ಚಲಾಯಿಸುವುದು ಎಂಬುದು ಎಲ್ಲರ ಮನಸ್ಸಿನಲ್ಲಿರುವ ಗೊಂದಲ. ಇಲ್ಲಿ ಪ್ರಮುಖವಾದ ಅಂಶವೆಂದರೆ ಯಾವ ವ್ಯಕ್ತಿ ಆರಿಸಿ ಬಂದರೆ ನಮ್ಮ ಸಂಘಕ್ಕೆ ಒಳಿತಾಗುತ್ತದೆ, ಅವರ ವಿದ್ಯಾಭ್ಯಾಸವೇನು, ಯಾವ ಉದ್ಯೋಗದಲ್ಲಿದ್ದಾರೆ, ಸಾರ್ವಜನಿಕ ಜೀವನದಲ್ಲಿ ಅಥವಾ ನಮ್ಮ ಸಂಘಕ್ಕೆ ಅವರ ಕೊಡುಗೆ ಏನು - ಎಂಬಿತ್ಯಾದಿ ವಿಷಯಗಳನ್ನು ಸರಿಯಾಗಿ ತಿಳಿದು, ಸಂಘವನ್ನು ಪಾರದರ್ಶಕ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗಬಲ್ಲ ವ್ಯಕ್ತಿಗಳನ್ನು ನಾವು ಆರಿಸಬೇಕಾಗುತ್ತದೆ. ಏನೇ ಇರಲಿ, ನಮ್ಮ ಪ್ರತಿಷ್ಠಿತ ಬೆಂಗಳೂರು ಬಂಟರ ಸಂಘಕ್ಕೆ ಒಂದು ನಿಷ್ಠಾವಂತ, ಸಮರ್ಥ, ಉದಾರ ಮನಸ್ಸಿನ, ಆಡಳಿತದಲ್ಲಿ ಪರಿಣತಿ ಹೊಂದಿರುವ, ಎಲ್ಲರೊಡನೆ ಬೆರೆತು ಕೆಲಸ ಮಾಡುವಂತಹ ತಂಡ ಆರಿಸಿ ಬರಲಿ ಎಂಬುದು ನನ್ನ ಆಸೆ. ಹಾಗೆಯೇ ಇದರಿಂದ ಸಂಘಕ್ಕೆ ಒಳಿತಾಗಲಿ ಎಂದು ಶ್ರೀ ವರಸಿದ್ಧಿ ವಿನಾಯಕನಲ್ಲಿ ಬೇಡಿಕೊಳ್ಳುತ್ತೇನೆ.

ನಮ್ಮ ಶಾಲೆಯ ವಿಜಯನಗರ ಸಂಕೀರ್ಣದ ಕಟ್ಟಡದ ಪೈಂಟಿಂಗ್ ಕೆಲಸ ಬಹುತೇಕ ಮುಗಿದಿದೆ. ತರಗತಿಗಳು ಆರಂಭವಾಗಿದ್ದು, ಎಲ್ಲವೂ ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳಲಾಗಿದೆ. ಶಾಲಾ ಬಸ್ಸುಗಳ ನಿರ್ವಹಣೆ, ಶಾಲೆಯ ಶುಚಿತ್ವದ ಕಡೆಗೆ ಗಮನ ಹರಿಸಿ ಸಂಬಂಧಪಟ್ಟವರಿಗೆ ತಕ್ಕ ನಿರ್ದೇಶನ ನೀಡಲಾಗಿದೆ. ಖಾಲಿ ಇರುವ ಅಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಶಾಲಾ ಮಕ್ಕಳ ಪೋಷಕರಿಂದ ಹಲವಾರು ಸಲಹೆ - ಸೂಚನೆಗಳು ಬರುತ್ತಿದ್ದು, ಅದರ ಬಗ್ಗೆ ಗಮನ ಹರಿಸಿ, ತಕ್ಕ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದೇವೆ. ಎರಡೂ ಶಾಲೆಗಳಲ್ಲಿ ಆಟ- ಪಾಠಗಳ ಜೊತೆಗೆ ಹೆಚ್ಚುವರಿ ಪಠ್ಯಕ್ರಮದ ಚಟುವಟಿಕೆಗಳನ್ನು (Extra curricular activities) ಪ್ರಾರಂಭಿಸಲು ನಿರ್ಧರಿಸಲಾಗಿದೆ.

ಸಂಘದ ಸದಸ್ಯರೆಲ್ಲರ ಆಯ್ಕೆಯಂತೆ ಮುಂದಿನ 2 ವರ್ಷಗಳ ಅವಧಿಗೆ ಉತ್ತಮವಾದ ತಂಡ ಆರಿಸಿ ಬರಲಿ, ಸಂಘ ಹಾಗೂ ಶಾಲೆಗಳ ನಿರ್ವಹಣೆಯ ಕೆಲಸಗಳು ಹಾಗೂ ಸಂಘದ ಅಭಿವೃದ್ಧಿ ಕೆಲಸಗಳು ಅತ್ಯಂತ ಪಾರದರ್ಶಕ ಹಾಗೂ ಸಮರ್ಥ ರೀತಿಯಲ್ಲಿ ಮುಂದುವರಿಯಲಿ ಎಂದು ಹಾರೈಸುತ್ತಾ, ನಮ್ಮ ಹೆಮ್ಮೆಯ ಬೆಂಗಳೂರು ಬಂಟರ ಸಂಘದ ಕೀರ್ತಿ ಪತಾಕೆಯನ್ನು ಇನ್ನೂ ಎತ್ತರಕ್ಕೆ ಹಾರಿಸಲಿ ಎಂಬ ಆಶಯದೊಂದಿಗೆ, ಸಂಘದ ಸರ್ವ ಸದಸ್ಯರಿಗೂ ಶ್ರೀ ವರಸಿದ್ಧಿ ವಿನಾಯಕನು ಒಳ್ಳೆಯದನ್ನು ಮಾಡಲಿ ಎಂದು ಬೇಡಿಕೊಳ್ಳುತ್ತೇನೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು
hegdemm@gmail.com

# ಗೌರವ ಕಾರ್ಯದರ್ಶಿಗಳ ವರದಿ



ಬಂಟರ ಸಂಘದ 2024–26 ನೇ ಸಾಲಿನ ನೂತನ ಆಡಳಿತ ಸಮಿತಿಯ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಆಯ್ಕೆಗಾಗಿ ದಿನಾಂಕ 28/07/2024 ರಂದು ಚುನಾವಣೆ ನಡೆಯಲಿದೆ. ಚುನಾವಣೆಯ ಪ್ರಕ್ರಿಯೆಗಳಿಗಾಗಿ ಸುಮಾರು 50 ಲಕ್ಷಗಳಷ್ಟು ಹಣ ಖರ್ಚಾಗುವ ಸ್ಥಿತಿಯನ್ನು ಮನಗಂಡು ಒಮ್ಮತದ ಅಭ್ಯರ್ಥಿಗಳ ಆಯ್ಕೆಗೆ ಪ್ರಯತ್ನಿಸಿದರೂ, ಅದು ಫಲಕಾರಿಯಾಗದೇ ಚುನಾವಣೆ ಅನಿವಾರ್ಯವಾಗಿದೆ.

ಬಂಟರ ಸಂಘದ ಚುನಾವಣೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅಭ್ಯರ್ಥಿಗಳೂ ದುಂದುವೆಚ್ಚ ಮಾಡುತ್ತಿರುವುದು ತಮ್ಮ ಗಮನಕ್ಕೂ ಬಂದಿರುತ್ತದೆ. ಇದು ಹೀಗೆಯೇ ಮುಂದುವರಿದರೆ ಅರ್ಹತೆ ಇದ್ದರೂ ಆರ್ಥಿಕವಾಗಿ ಅಶಕ್ತ ಎನ್ನುವ ಕಾರಣದಿಂದ ಹೆಚ್ಚಿನ ಮಂದಿ ಚುನಾವಣಾ ರಾಜಕೀಯದಿಂದ ವಿಮುಖರಾಗುವ ಎಲ್ಲಾ ಸಾಧ್ಯತೆಗಳಿವೆ. ಈ ಕಾರಣದಿಂದ ಮುಂದಿನ ದಿನಗಳಲ್ಲಿ ಬಂಟರ ಸಂಘದಲ್ಲಿ ಆಮೂಲಾಗ್ರವಾದ ಚುನಾವಣಾ ನೀತಿ ಸಂಹಿತೆಯನ್ನು ಜಾರಿಗೊಳಿಸುವ ಅವಶ್ಯಕತೆ ಇದೆ ಎನ್ನುವುದು ನನ್ನ ಅಭಿಪ್ರಾಯ.

ಸಮಾಜ ಭಾಂದವರನ್ನು ಒಂದೆಡೆ ಸೇರಿಸಿ ತಮ್ಮ ಕಷ್ಟ ಸುಖಗಳಿಗೆ ಜೊತೆಯಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಜೊತೆಗೆ ಎಲ್ಲರೂ ನಿಲ್ಲಬೇಕು ಅನ್ನುವ ಪರಮ ಉದ್ದೇಶದಿಂದ ಸ್ಥಾಪನೆಯಾದದ್ದು ನಮ್ಮ ಬಂಟರ ಸಂಘ ಬೆಂಗಳೂರು, ನಮ್ಮ ಹಿರಿಯರು ಅದಕ್ಕಾಗಿಯೇ ಭದ್ರ ಬುನಾದಿ ಹಾಕಿದ್ದು ಅದರ ತಳಹದಿಯಲ್ಲಿಯೇ ಸಂಘ ಬೆಳೆದು ಬಂದಿದೆ.

ಬಂಟರ ಸಂಘದ ಪ್ರತಿನಿಧಿಯಾಗುವುದು ಕೇವಲ ಪ್ರತಿಷ್ಠೆಗಾಗಿ ಅನ್ನೋದಕ್ಕಿಂತ ಪ್ರಾಮಾಣಿಕವಾಗಿ ಸಂಘಕ್ಕೆ ನಾನೇನು ಕೊಡುಗೆ ಕೊಡಬಲ್ಲೆ ಅನ್ನುವುದನ್ನು ಸ್ಪರ್ಧಿಸುವ ಪ್ರತಿಯೊಬ್ಬರೂ ತಮ್ಮಲ್ಲೇ ಪ್ರಶ್ನೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಸಂಘದ ಪ್ರತಿನಿಧಿಯಾಗ ಬಯಸುವ ಪ್ರತಿಯೊಬ್ಬ ಕಾರ್ಯಕರ್ತನಿಗೂ ಸಾಮಾಜಿಕ ಕಳಕಳಿ, ಸೇವಾ ಮನೋಭಾವ, ಸಮಾಜ ಭಾಂದವರಿಗೆ ನೀಡಬಹುದಾದ ಸೌಲಭ್ಯ ಮತ್ತು ಸಹಕಾರದ ಕುರಿತಾದ ಜ್ಞಾನ ಇರಬೇಕು.

ಕೆಲವು ಉಳ್ಳವರ ಹಿತಾಸಕ್ತಿ, ಅಪಪ್ರಚಾರ, ಗುಂಪುಗಾರಿಕೆಯಿಂದಾಗಿ ಬಂಟರ ಸಂಘದ ಬಗ್ಗೆ ಸಾಮಾನ್ಯ ಸದಸ್ಯರಲ್ಲಿ ಗೊಂದಲ ಸೃಷ್ಟಿ ಮಾಡಿದ್ದು ನಿಜ. ಸಂಘದ ಹೊರಗಡೆ ಇದ್ದರೂ ತಮ್ಮ ಮುಷ್ಟಿಯಲ್ಲಿ ಎಲ್ಲವನ್ನೂ ಹಿಡಿದಿಟ್ಟುಕೊಳ್ಳಬೇಕೆನ್ನುವ ಕೆಲವು ಮನಸ್ಥಿತಿಗಳು ಸಂಘದ ಬೆಳವಣಿಗೆಗೆ ಮಾರಕವಾಗಿದೆ. ಆದ್ದರಿಂದ, ಈ ಬಾರಿ ಚುನಾವಣೆಯಲ್ಲಿ ಕಡ್ಡಾಯವಾಗಿ ಮತ ಚಲಾಯಿಸಿ. ಪ್ರತೀ ಅಭ್ಯರ್ಥಿಗಳ ಬಗ್ಗೆ ಸಮಗ್ರ ಮಾಹಿತಿ ಹಾಗೂ ಸಂಘದ ಬಗೆಗೆ ಅವರ ಕನಸುಗಳೇನು ಅವರ ಯೋಜನೆಗಳ ಬಗ್ಗೆ ತಿಳಿದುಕೊಳ್ಳಿ. ಸಮರ್ಥ ಅಭ್ಯರ್ಥಿಗಳನ್ನು ಆರಿಸಿ. ನೀವು ಆರಿಸಿದ ಅಭ್ಯರ್ಥಿಗಳು ಸರಿಯಾಗಿ ಕೆಲಸ ಮಾಡದಿದ್ದರೆ ಪ್ರಶ್ನೆ ಮಾಡುವ ಅಧಿಕಾರ ಸದಸ್ಯರಿಗಿದೆ. ಸಂಘದಿಂದ ಸಿಗುವ ಸೌಲಭ್ಯಗಳು ಅರ್ಹರಿಗೆ ತಲುಪಿಸಲು ನಿಮ್ಮ ಸಹಕಾರ ಸದಾ ನೀಡಿ.

ಕಳೆದ ಎರಡು ವರ್ಷಗಳಿಂದ ಸಂಘದ ಕಾರ್ಯಚಟುವಟಿಕೆಯಲ್ಲಿ ನಮ್ಮೊಂದಿಗೆ ಜೊತೆಯಾದ ಎಲ್ಲಾ ಸದಸ್ಯರುಗಳಿಗೆ ಹೃದಯಾಂತರಾಳದ ವಂದನೆಗಳು. ಎಲ್ಲಾ ಸದಸ್ಯರನ್ನು ಒಂದೇ ಭಾವನೆಯಿಂದ ಹಾಗೂ ಸದಸ್ಯರ ಕಷ್ಟ ಕಾರ್ಪಣ್ಯಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಆತ್ಮ ತೃಪ್ತಿ ನನಗಿದೆ.

**ಮತ್ತೊಮ್ಮೆ ಪ್ರೀತಿಯ ವಂದನೆಗಳು.**

ಇಂತಿ ತಮ್ಮ ಪ್ರೀತಿಯ,

**ಚಿ. ಆನಂದರಾಮ ಶೆಟ್ಟಿ**

**ಗೌರವ ಕಾರ್ಯದರ್ಶಿ**

## ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಮಂಡಳಿಯ ಚುನಾವಣೆ 2024–2026
## ದಿನಾಂಕ : 28.07.2024, ಬೆಳಿಗ್ಗೆ 9.00 ರಿಂದ ಸಂಜೆ 5.00 ಘಂಟೆಯವರೆಗೆ
## ಅಭ್ಯರ್ಥಿಗಳ ಅಂತಿಮ ಪಟ್ಟಿ

### ಅಧ್ಯಕ್ಷ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಸಿಎ. ಅಶೋಕ್ ಶೆಟ್ಟಿ ಎಂ.**<br>ಸದಸ್ಯತ್ವ ಸಂಖ್ಯೆ: 2080 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ– 2010–2012<br>ಕಾರ್ಯಕಾರಿ ಸಮಿತಿ ಸದಸ್ಯ –2012–2014<br>ಹಣಕಾಸು ಸಮಿತಿ ಸದಸ್ಯ – 2022–2024 |
| 02 | <br>**ರಾಜಾರಾಮ ಶೆಟ್ಟಿ ಯು.**<br>ಸದಸ್ಯತ್ವ ಸಂಖ್ಯೆ: 8098 / ಸಿ.ಎಲ್. | ಸಾಹಿತ್ಯ ಮತ್ತು ಪ್ರಕಾಶನ ಸಮಿತಿ ಸದಸ್ಯ<br>ಕಾನೂನು ವಿಭಾಗದ ಸದಸ್ಯ<br>ವಿವಾಹ ವೇದಿಕೆ ಸಮಿತಿ ಸದಸ್ಯ<br>ಸಮಾಜ ಸೇವಾ ಸಮಿತಿ ಸದಸ್ಯ |
| 03 | <br>**ಶಂಕರ್ ಶೆಟ್ಟಿ ಹೆಚ್.**<br>ಸದಸ್ಯತ್ವ ಸಂಖ್ಯೆ: 1528 / ಸಿ.ಎಲ್. | ಬೈಲಾ ತಿದ್ದುಪಡಿ ಸಮಿತಿ ಸದಸ್ಯ 2016–2018<br>ಬಂಟರ ಸಂಘದ ಪ್ರತಿನಿಧಿ ವಕೀಲರು 2016–2018<br>ವಿಚಾರಣಾ ಸಮಿತಿ ಸದಸ್ಯ ಜೆಂಟ್ಸ್ ಹಾಸ್ಟೆಲ್–2023 |
| 04 | <br>**ಡಾ. ಉಮಾನಾಥ ಶೆಟ್ಟಿ ವೈ.**<br>ಸದಸ್ಯತ್ವ ಸಂಖ್ಯೆ: 3311 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ 2016–18<br>ಕಾರ್ಯಕಾರಿ ಸಮಿತಿ ಸದಸ್ಯ 2018–22 |

## ಪ್ರಥಮ ಉಪಾಧ್ಯಕ್ಷ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 |  **ಕರುಣಾಕರ ಶೆಟ್ಟಿ ಬಿ.**<br>ಸದಸ್ಯತ್ವ ಸಂಖ್ಯೆ: 4257 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ 2014–16 |
| 02 |  **ಸಂತೋಷ್ ಶೆಟ್ಟಿ ಜೆ.**<br>ಸದಸ್ಯತ್ವ ಸಂಖ್ಯೆ: 3781 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ 2004–2006<br>ಕಾರ್ಯಕಾರಿ ಸಮಿತಿ ಸದಸ್ಯ 2006–2008<br>ಜೊತೆ ಕಾರ್ಯದರ್ಶಿ 2012–2014<br>ಗೌರವ ಕಾರ್ಯದರ್ಶಿ 2016–2018 |

## ದ್ವಿತೀಯ ಉಪಾಧ್ಯಕ್ಷೆ (ಮಹಿಳೆ) ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 |  **ಕಾಂತಿ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 5741 / ಎಲ್.ಎಮ್. | ಕಾರ್ಯಕಾರಿ ಸಮಿತಿ ಸದಸ್ಯೆ 2014–2016<br>ಜೊತೆ ಕಾರ್ಯದರ್ಶಿ 2016–18 |
| 02 |  **ಮಂಜುಳಾ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 953 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯೆ 2012–2014<br>ಜೊತೆ ಕಾರ್ಯದರ್ಶಿ 2014–2016<br>ಕಾರ್ಯಕಾರಿ ಸಮಿತಿ ಸದಸ್ಯೆ 2022–2024 |

## ಗೌರವ ಕಾರ್ಯದರ್ಶಿ ಸ್ಥಾನ (ಅವಿರೋಧವಾಗಿ ಆಯ್ಕೆಯಾಗಿದ್ದಾರೆ)

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| | <br>**ವಿಜಯ್ ಜೆ. ಶೆಟ್ಟಿ. ಹಾಲಾಡಿ.**<br>ಸದಸ್ಯತ್ವ ಸಂಖ್ಯೆ: 3687 / ಪಿ.ಎಲ್. | ಸಂಚಾಲಕ–ವಿದ್ಯಾರ್ಥಿವೇತನ ಸಮಿತಿ 2014–2016<br>ಕಾರ್ಯಕಾರಿ ಸಮಿತಿ ಸದಸ್ಯ 2016–2018<br>ಕಾರ್ಯಕಾರಿ ಸಮಿತಿ ಸದಸ್ಯ 2018–2022 |

## ಜಂಟಿ ಕಾರ್ಯದರ್ಶಿ ಸ್ಥಾನ (ಅವಿರೋಧವಾಗಿ ಆಯ್ಕೆಯಾಗಿದ್ದಾರೆ)

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| | <br>**ಜಯಶ್ರೀ. ಸಿ. ರೈ.**<br>ಸದಸ್ಯತ್ವ ಸಂಖ್ಯೆ: 1761 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯೆ–2018–2022<br>ಕಾರ್ಯಕಾರಿ ಸಮಿತಿ ಸದಸ್ಯೆ–2022–2024 |

## ಖಜಾಂಚಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಅಶೋಕ್ ಕುಮಾರ್ ಶೆಟ್ಟಿ ಹೆಚ್.**<br>ಸದಸ್ಯತ್ವ ಸಂಖ್ಯೆ: 2761 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ 2018–2022 |

## ಖಜಾಂಚಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 02 |  ರತ್ನಾಕರ್ ಶೆಟ್ಟಿ ಕೆ.<br>ಸದಸ್ಯತ್ವ ಸಂಖ್ಯೆ: 2808 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2014–2016<br>ಕಾರ್ಯಕಾರಿ ಸಮಿತಿ ಸದಸ್ಯ – 2016–2018 |
| 03 |  ರವಿರಾಜ್ ಎಸ್. ಶೆಟ್ಟಿ<br>ಸದಸ್ಯತ್ವ ಸಂಖ್ಯೆ: 3800 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2001 –2004<br>ಕಾರ್ಯಕಾರಿ ಸಮಿತಿ ಸದಸ್ಯ – 2006–2008<br>ಕಾರ್ಯಕಾರಿ ಸಮಿತಿ ಸದಸ್ಯ – 2008–2010<br>ಕಾರ್ಯಕಾರಿ ಸಮಿತಿ ಸದಸ್ಯ – 2012–2014<br>ಸಂಪಾದಕರು ಸ್ನೇಹಚಿಂತನೆ ಪತ್ರಿಕೆ 2016–2018 |
| 04 |  ಉಮೇಶ್ ರೈ. ಬಿ.<br>ಸದಸ್ಯತ್ವ ಸಂಖ್ಯೆ: 3793 / ಎಲ್.ಎಮ್. | ಕಾರ್ಯಕಾರಿ ಸಮಿತಿ ಸದಸ್ಯ – 2008–2010<br>ಕಾರ್ಯಕಾರಿ ಸಮಿತಿ ಸದಸ್ಯ – 2012–2014<br>ಕ್ರೀಡಾ ಸಮಿತಿ ಸದಸ್ಯ<br>ಸಾಂಸ್ಕೃತಿಕ ಸಮಿತಿ ಸದಸ್ಯ<br>ಖರೀದಿ ವಿಭಾಗ ಸದಸ್ಯ<br>ಆತಿಥ್ಯ ಮತ್ತು ಊಟೋಪಾಚಾರ ಸಮಿತಿ ಸದಸ್ಯ<br>ಪ್ರಾರ್ಥನಾ ಮಂದಿರ ಸಮಿತಿ ಸದಸ್ಯ |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 |  ಅಜಿತ್ ಕುಮಾರ್ ಶೆಟ್ಟಿ ಕೆ.<br>ಸದಸ್ಯತ್ವ ಸಂಖ್ಯೆ: 6510 / ಸಿ.ಎಲ್. | ಕ್ರೀಡಾ ಸಮಿತಿ ಸದಸ್ಯ<br>ಸಮಾಜ ಸೇವಾ ಸಮಿತಿ ಸದಸ್ಯ |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 02 |  **ಅಜಿತ್ ವಿ. ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 11208 / ಸಿ.ಎಲ್. | ಸದಸ್ಯ |
| 03 |  **ಅಣ್ಣಯ್ಯ ಶೆಟ್ಟಿ ಪಿ.**<br>ಸದಸ್ಯತ್ವ ಸಂಖ್ಯೆ: 7725 / ಸಿ.ಎಲ್. | ವಿವಾಹ ವೇದಿಕೆ ಸಮಿತಿ ಸದಸ್ಯ |
| 04 |  **ಗೀತಾ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 14489 / ಸಿ.ಎಲ್. | ಯುವ ವಿಭಾಗ ಸದಸ್ಯೆ |
| 05 |  **ಕಾಶೀನಾಥ್ ರೈ. ಟಿ. ಆರ್.**<br>ಸದಸ್ಯತ್ವ ಸಂಖ್ಯೆ: 13334 / ಸಿ.ಎಲ್. | ಸದಸ್ಯ |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 06 |  **ಲೀಲಾವತಿ ಶೆಟ್ಟಿ** ಸದಸ್ಯತ್ವ ಸಂಖ್ಯೆ : 10745 / ಸಿ.ಎಲ್. | ಸದಸ್ಯೆ |
| 07 |  **ನಿರಂಜನ್ ಶೆಟ್ಟಿ ಕೆ.** ಸದಸ್ಯತ್ವ ಸಂಖ್ಯೆ: 12677 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ –2022–2024 |
| 08 |  **ಪ್ರಶಾಂತ್ ಶೆಟ್ಟಿ** ಸದಸ್ಯತ್ವ ಸಂಖ್ಯೆ : 15672 / ಸಿ.ಎಲ್. | ಸದಸ್ಯ |
| 09 |  **ಪ್ರಶಾಂತ್ ಶೆಟ್ಟಿ ಎಸ್.** ಸದಸ್ಯತ್ವ ಸಂಖ್ಯೆ : 3916 / ಸಿ.ಎಲ್. | ಯುವ ವಿಭಾಗದ ಸದಸ್ಯ 2001–2002<br>ವೈದ್ಯಕೀಯ ವಿಭಾಗ ಸದಸ್ಯ 2012–2014<br>ಉದ್ಯೋಗ ವಿಭಾಗದ ಸದಸ್ಯ 2008–2010 |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 10 | <br>**ಪ್ರತಾಪ್ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ : 11911 / ಸಿ.ಎಲ್. | ಸದಸ್ಯ |
| 11 | <br>**ರಮೇಶ್ ಜಿ. ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 12313 / ಎಲ್.ಎಂ. | ಸಂಚಾಲಕ ವಿವಾಹ ವೇದಿಕೆ ಸಮಿತಿ 2018–2022<br>ಕಾರ್ಯಕಾರಿ ಸಮಿತಿ ಸದಸ್ಯ –2022–2024 |
| 12 | <br>**ರವೀಂದ್ರ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 10843 / ಸಿ.ಎಲ್. | ಸ್ನೇಹ ಚಿಂತನೆ ಸಂಪಾದಕ ಮಂಡಳಿ ಸದಸ್ಯ |
| 13 | <br>**ಸುಧಾಕರ್ ಶೆಟ್ಟಿ ಎ.**<br>ಸದಸ್ಯತ್ವ ಸಂಖ್ಯೆ: 5799 / ಎಲ್.ಎಂ. | ಆತಿಥ್ಯ ಮತ್ತು ಊಟೋಪಚಾರ ಸಮಿತಿ ಸದಸ್ಯ<br>ಪ್ರಾರ್ಥನಾ ಮಂದಿರ ಸಮಿತಿ ಸದಸ್ಯ |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 14 | <br>**ಸಂತೋಷ್ ಕುಮಾರ್ ಶೆಟ್ಟಿ. ಎಂ.**<br>ಸದಸ್ಯತ್ವ ಸಂಖ್ಯೆ: 6549 / ಸಿ.ಎಲ್. | ಯಕ್ಷಗಾನ ಸಮಿತಿ ಸದಸ್ಯ 2010–2012<br>ಯಕ್ಷಗಾನ ಸಮಿತಿ ಸದಸ್ಯ 2018–2022 |
| 15 | <br>**ಶಕುಂತಲ ಶೆಟ್ಟಿ.**<br>ಸದಸ್ಯತ್ವ ಸಂಖ್ಯೆ : 9869 / ಸಿ.ಎಲ್ | ಕಾನೂನು ವಿಭಾಗ ಸದಸ್ಯೆ 2022–2024 |
| 16 | <br>**ಶೋಭ ಶೇಕ.**<br>ಸದಸ್ಯತ್ವ ಸಂಖ್ಯೆ : 5383 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯೆ 2022–2024<br>ಸಾಂಸ್ಕೃತಿಕ ಸಮಿತಿ ಸದಸ್ಯೆ 2018–2022<br>ಯಕ್ಷಗಾನ ಸಮಿತಿ ಸದಸ್ಯೆ 2016–2018 |
| 17 | <br>**ಸುನೀಲ್ ಕುಮಾರ್ ಶೆಟ್ಟಿ ಜೆ.**<br>ಸದಸ್ಯತ್ವ ಸಂಖ್ಯೆ: 6041 / ಸಿ.ಎಲ್. | ಸಂಚಾಲಕ, ಖರೀದಿ ವಿಭಾಗ 2022–2024<br>ಕ್ರೀಡಾ ಸಮಿತಿ ಸದಸ್ಯ<br>ವೆಬ್‌ಸೈಟ್ ಮತ್ತು ಸದಸ್ಯತ್ವ ಸಮಿತಿ ಸದಸ್ಯ<br>ವಿದ್ಯಾರ್ಥಿ ವೇತನ ಸಮಿತಿ ಸದಸ್ಯ |

| ಕಾರ್ಯಕಾರಿ ಸಮಿತಿ ಸ್ಥಾನಕ್ಕೆ | | |
|---|---|---|
| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
| 18 |  **ಸುರೇಂದ್ರ ಶೆಟ್ಟಿ. ಹೆಚ್.** ಸದಸ್ಯತ್ವ ಸಂಖ್ಯೆ : 4308 / ಸಿ.ಎಲ್. | ವೆಬ್‌ಸೈಟ್ ಮತ್ತು ಸದಸ್ಯತ್ವ ಸಮಿತಿ ಸದಸ್ಯ 2022–24 |
| 19 |  **ಉಮೇಶ್ ಡಿ. ಪೂಂಜ.** ಸದಸ್ಯತ್ವ ಸಂಖ್ಯೆ : 3469 / ಸಿ.ಎಲ್. | ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ ಸದಸ್ಯ 2022–2024 |
| 20 |  **ಉಮೇಶ್ ಕುಮಾರ್ ಶೆಟ್ಟಿ.** ಸದಸ್ಯತ್ವ ಸಂಖ್ಯೆ: 11469 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ 2022–2024 ಸಂಚಾಲಕ, ಪ್ರಾರ್ಥನಾ ಮಂದಿರ ಸಮಿತಿ 2018–2022 |
| 21 |  **ಯೋಗ್ಯ ಎಲ್. ರೈ.** ಸದಸ್ಯತ್ವ ಸಂಖ್ಯೆ: 5271 / ಸಿ.ಎಲ್. | ಸಂಚಾಲಕಿ, ಮಹಿಳಾ ವಿಭಾಗ 2018–2022 ಸಾಂಸ್ಕೃತಿಕ ಸಮಿತಿ ಸದಸ್ಯೆ |

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

ನಂ. 324, ಬಂಟರ ಸಂಘ ಸಂಕೀರ್ಣ, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು – 560 040

**ಗೌರವಾನ್ವಿತ ಸದಸ್ಯರೇ,**

ಸಂಘದ ನೂತನ ಆಡಳಿತ ಮಂಡಳಿಯ ಆಯ್ಕೆ ಚುನಾವಣೆಯು ದಿನಾಂಕ 28.07.2024 ರಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 5.00 ಘಂಟೆಯವರೆಗೆ ನಡೆಯಲಿದೆ. ಈ ಚುನಾವಣೆಯ ಮತದಾನವು ಬಂಟರ ಸಂಘದ ಆವರಣ ಹಾಗೂ ಮುಲ್ಕಿ ಸುಂದರರಾಮ್ ಶೆಟ್ಟಿ ಸ್ಮಾರಕ ಎಮ್.ಎಸ್.ಆರ್.ಎಸ್. ನಗರ ಟ್ರಸ್ಟ್, ನಂ. 114/2, 9ನೇ ಮೈನ್, 7ನೇ ಕ್ರಾಸ್, ಮುಖ್ಯ ಉದ್ಯಾನವನದ ಹತ್ತಿರ, ಮುಲ್ಕಿ ಸುಂದರರಾಮ್ ಶೆಟ್ಟಿ ನಗರ, ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076 ಇಲ್ಲಿ ಏಕಕಾಲದಲ್ಲಿ ನಡೆಯಲಿದೆ.

ನಮ್ಮ ದಾಖಲೆಗಳ ಪ್ರಕಾರ ಈ ಕೆಳಗಿನ ಪಿನ್‌ಕೋಡ್ ವ್ಯಾಪ್ತಿಯಲ್ಲಿ ಬರುವ ಸದಸ್ಯರು ಎಂ.ಎಸ್.ಆರ್. ಎಸ್. ನಗರದ ಮತಗಟ್ಟೆಯಲ್ಲಿ ಮಾತ್ರ ಮತದಾನ ಮಾಡಲು ಅರ್ಹರಾಗಿರುತ್ತಾರೆ.

560011, 560029, 560034, 560041, 560068, 560069, 560076, 560078, 560083, 560095, 560099, 560100, 560102, 560105, 560108, 560109, 560114, 562106, 562107.

ಮತದಾನಕ್ಕೆ ಸದಸ್ಯರ ಗುರುತು ಪತ್ರ (Membership Smart Card) ವನ್ನು ತಪ್ಪದೇ ತರಬೇಕಾಗಿ ವಿನಂತಿ. ಈ ತನಕವೂ ತಮ್ಮ ಗುರುತಿನ ಚೀಟಿಯನ್ನು ಪಡೆಯದ ಸದಸ್ಯ ಬಾಂಧವರು ಸಂಘದ ಕಛೇರಿಯನ್ನು ಸಂಪರ್ಕಿಸಿ ಕೂಡಲೇ ತಮ್ಮ Smart Card ಗಳನ್ನು ದಿನಾಂಕ 23.07.2024 ರ ಒಳಗೆ ಪಡೆದುಕೊಳ್ಳುವಂತೆ ಈ ಮೂಲಕ ವಿನಂತಿಸುತ್ತಿದ್ದೇವೆ.

ಸದಸ್ಯತ್ವದ ಗುರುತಿನ ಚೀಟಿ ಕಳೆದುಕೊಂಡಲ್ಲಿ ತಮ್ಮ ಹೆಸರು ಮತ್ತು ಸದಸ್ಯತ್ವದ ಸಂಖ್ಯೆಯೊಂದಿಗೆ ದಿನಾಂಕ 18.07.2024 ರ ಒಳಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಿದಲ್ಲಿ ಹೊಸ ಗುರುತಿನ ಚೀಟಿ ಸಿದ್ಧಪಡಿಸಿ ನೀಡಲಾಗುವುದು.

ಸಹಿ/–

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ



## ಅಭಿನಂದನೆಗಳು

ಬಂಟರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಷಿಯವರು ಬೆಂಗಳೂರು ನಗರ ಜಿಲ್ಲೆಯ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ 'ಅಧ್ಯಕ್ಷ'ರಾಗಿ ನಾಮ ನಿರ್ದೇಶನ ಮಾಡಿರುತ್ತಾರೆ.

ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

---

## Congratulations!



**Mr. Sahaj C Shetty**, son of Mr. Chandrahasa and Mrs. Jayalakshmi C Shetty, has successfully been inducted into the Flying Branch of the Indian Airforce Academy. He cleared his AFCAT examination and got recommended From 2 AFSB MYSORE, in his FIRST ever Attempt. He has been meritorious by getting All India Rank 29, with a standing of 7th place in the Flying Merit.

He achieved this remarkable feat while pursuing his Final year in Aerospce Engineering at B.M.S. College of Engineering.

Mr. Sahaj C Shetty has joined the Airforce Academy, Dundigal, Hyderabad for his training course on 29th June 2024.

Bunts Sangha Bangalore congratulates and wishes him all the best for his future endeavors.

---

## Academic Excellence

Congratulations!

## PUC/ 12th Std. Achiever



**Khushi Sukesh Shetty**
D/o. Sukesh V Shetty & Smitha Shetty
**PUC (Sc.) - 97.7%**
Sadhana PU College, Bangalore

---

**ವಿಶೇಷ ಸೂಚನೆ:**

2022–23 ಮತ್ತು 2023–24 ನೇ ಸಾಲಿನ ಕ್ರೀಡಾಕೂಟದ ಕೆಲವು ವಿಜೇತರ ಪ್ರಶಸ್ತಿ ಪತ್ರ / ಟ್ರೋಫಿ / ನಗದು ಬಹುಮಾನಗಳು ಸಂಗ್ರಹಿಸದೇ ಸಂಘದಲ್ಲೇ ಉಳಿದಿರುತ್ತದೆ. ಅಂತಹ ವಿಜೇತರು ಸಂಘಕ್ಕೆ ಬಂದು, ಅವರ ಗುರುತಿನ ಚೀಟಿಯನ್ನು ತೋರಿಸಿ, ಪ್ರಶಸ್ತಿ ಪತ್ರ / ಟ್ರೋಫಿ / ನಗದು ಬಹುಮಾನಗಳನ್ನು ಪಡೆದುಕೊಳ್ಳಬಹುದು.

**ಕ್ರೀಡಾ ಸಮಿತಿ**

ಬಂಟರ ಸಂಘ ಬೆಂಗಳೂರು

# Congratulations



**Dr. K Prakash Shetty**

Hearty Congratulations to our donor and Chairman, Governing Council, Bunts Sangha RNS Vidyaniketan on being awarded the Honorary Doctorate from the esteemed Mangalore University.

Bunts Sangha Bangalore is proud of your dedication and continuous support to society.

We congratulate and wish you achieve many more accolades on your journey. God Bless you and your family.




President, office bearers, EC members and all members of Bunt's Sangha Bangalore

ADVT.


Bunts' Sangha Bengaluru Election
ರಾಜಾರಾಮ ಶೆಟ್ಟಿ ಉಪ್ಪಳ
Rajarama Shetty Uppala
For the post of PRESIDENT
VOTE!
BE RESPONSIBLE
SL. No. 2
Ready to Lead!
ವೋಟ್ ಮಾಡಿ
ಬಲಿಷ್ಠ ಬಂಟ್ಸ್ ಸಂಘ ಬಲಿಷ್ಠ ಸಮಾಜ

ADVT.



**ಆತ್ಮೀಯರಾದ ಬೆಂಗಳೂರು ಬಂಟರ ಸಂಘದ ಎಲ್ಲಾ ಸದಸ್ಯರೇ, ಸಮಾಜ ಬಾಂಧವರೇ...**

ನಾನು **ರಾಜಾರಾಮ ಶೆಟ್ಟಿ ಉಪ್ಪಳ** ಬೆಂಗಳೂರು ಬಂಟ್ಸ್ ಸಂಘದ 2024-26ನೇ ಸಾಲಿನ ಚುನಾವಣೆಯಲ್ಲಿ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿ. ಮೂಲತಃ ಮಂಗಲ್ಪಾಡಿ (ಉಪ್ಪಳದ) ಪ್ರತಿಷ್ಠಿತ ಕುಟುಂಬ.

ಅಮೆರಿಕಾದ ಇಂಡಿಯಾನಾಪೊಲಿಸ್ ಯೂನಿವರ್ಸಿಟಿಯ ಸ್ನಾತಕೋತ್ತರ(MBA) ಪದವಿ.

- ಪ್ರಸಿದ್ಧ ಅಮೆರಿಕನ್ ಸಂಸ್ಥೆ ಅಬ್ಬೊಟ್ ಇಂಡಿಯಾ ಕಂಪನಿಯಲ್ಲಿ ಸುಧೀರ್ಘ ಆಡಳಿತದ ಅನುಭವ Regional Manager (Dy GM) ಆಗಿ ನಿವೃತ್ತಿ! ನೇರ ನಡೆನುಡಿಯ, ನಿಷ್ಠಾವಂತ ನಿಷ್ಕಳಂಕ ವ್ಯಕ್ತಿತ್ವ!
- ಭಾರತದ ಎಲ್ಲೆಡೆ ಸುಮಾರು 15 ರಾಜ್ಯಗಳಲ್ಲಿ 300ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಪ್ರಮುಖಹುದ್ದೆಗಳಲ್ಲಿ ನುರಿತ ಅನುಭವಿ ಆಡಳಿತಗಾರ.
- ಹಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಕಂಪನಿಗಳಲ್ಲಿ ಪ್ರತಿಷ್ಠಿತ ಹುದ್ದೆಗಳಲ್ಲಿ ಆಡಳಿತದ ಅನುಭವ(MD Boosts Bee digital (Pvt) Ltd, Director SPG Medisafe india (Pvt Ltd), General Manager Maruti Suzuki, Bharati Axa Business Management.

**ಸುಖೀ ಕುಟುಂಬ**:-

- ಧರ್ಮ ಪತ್ನಿ ಡಾ. ಜಯಶ್ರೀ ಆರ್. ಶೆಟ್ಟಿ ಪ್ರಸಿದ್ಧ ಸ್ತ್ರೀ ವೈದ್ಯೆ.
- ಮಗ ಸೃಜನ್ ಶೆಟ್ಟಿ ಜಗತ್ಪ್ರಸಿದ್ಧ ಐಐಟಿ ಕಾನ್ಪುರ್ ನಲ್ಲಿ ಅತ್ಯುತ್ತಮ ಅಂಕಗಳಿಂದ ತೇರ್ಗಡೆ ಹೊಂದಿ ಈಗ ತನ್ನದೇ ಅಂತರರಾಷ್ಟ್ರೀಯ ಕಂಪನಿ (ಫ್ಯೂಜ್ ಟೆಕ್ Fuze Tech ) ನಡೆಸುತ್ತಿದ್ದಾನೆ. ಸೊಸೆ ಪೂರ್ಣಿಮಾ ಸೀನಿಯರ್ ಪ್ರೊಡಕ್ಟ್ ಡಿಸೈನರ್ ಆಗಿ ಐಬಿಎಂ ನಲ್ಲಿ ಕೆಲಸ.
- ಮಗಳು ಕೃತಿ, ಅಳಿಯ ಆದರ್ಶ್, ಮೊಮ್ಮಗಳು ಅಮೇಯ ಅಮೆರಿಕದಲ್ಲಿ ನೆಲೆಸಿದ್ದು ಅಂತರರಾಷ್ಟ್ರೀಯ ಏಐಜಿ (AIG Global) ನಲ್ಲಿ ಜಾಗತಿಕ ಮಟ್ಟದ ಉನ್ನತ ಹುದ್ದೆಯಲ್ಲಿದ್ದಾರೆ. ಅಳಿಯ ಆದರ್ಶ್ ಅಮೆರಿಕದ ಕಂಪನಿಯ ಉನ್ನತ ಸ್ಥಾನದಲ್ಲಿದ್ದಾರೆ.
- ರಾಜಾರಾಂ ಶೆಟ್ಟಿ ತಮ್ಮ ಜೊತೆ ಇಬ್ಬರು ಸೋದರ ಅಳಿಯಂದಿರಿಗೂ ಉತ್ತಮ ವಿದ್ಯಾಭ್ಯಾಸ ಕೊಡಿಸುವ ಮೂಲಕ ಅವರು ಕೂಡಾ ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ

**ಸಮಾಜ ಸೇವೆ:-**

1) ಬೆಂಗಳೂರ ಬಂಟರ ಸಂಘದ ನಾಲ್ಕು ಕಮಿಟೀಗಳಲ್ಲಿ ಸೇವೆ.
2) RNS Shanthi nivas ಮಾಲಕ ಸಂಘದ ಅಧ್ಯಕ್ಷರಾಗಿ ಉತ್ತಮ ಸೇವೆ.
3) ಇಂದೋರ್ ಕನ್ನಡ ಸಂಸ್ಕೃತಿ ಸಂಘ -ಬಂಟರ ಸಂಘದ, ಮತ್ತು ಇಂದೋರ್ ಕರ್ನಾಟಕ ವಿದ್ಯಾನಿಕೇತನದಲ್ಲಿ ಗಣನೀಯ ಸೇವೆ
4) ಹೈದರಾಬಾದ್, ಸಿಕಂದ್ರಾಬಾದ್, ರಾಂಚಿ ಹಟಿಯಾ ಕನ್ನಡ ಸಂಘ ಮತ್ತು ಬಂಟರ ಸಂಘಗಳಲ್ಲಿ ಗಣನೀಯ ಸಾಧನೆಗಳನ್ನು ಮಾಡಿದ್ದಾರೆ.
5) ಭಾರತದ ಹಲವು ರಾಜ್ಯಗಳಲ್ಲಿ ಬಂಟ ಸಮುದಾಯದ ಹತ್ತು ಹಲವು ಕ್ಷೇತ್ರಗಳಲ್ಲಿ ಉದಾತ್ತ ಸಮಾಜ ಸೇವೆ.
6) ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಟ್ರಾಫಿಕ್ ವಾರ್ಡನ್ ಸಂಸ್ಥೆಯಲ್ಲಿ ಹಿರಿಯ (DyCTW) ಅಧಿಕಾರಿ.
7) ಅಂತಾರಾಷ್ಟ್ರೀಯ ಲಯನ್ ಸಂಸ್ತೆ ಯಲ್ಲಿ ವಲಯ ಅಧ್ಯಕ್ಷ, ಲಯನ್ಸ್ ಬ್ಲಡ್ ಬ್ಯಾಂಕ್, ಐ ಬ್ಯಾಂಕ್, ಹಂಗರ್ ಪ್ರಾಜೆಕ್ಟ್ ಹೀಗೆ ಬೇರೆ ಬೇರೆ ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ.

**ಬಲಿಷ್ಠ ಬಂಟರ ಸಂಘ**
**ನಮ್ಮ ಸಮಾಜ ಬಲಿಷ್ಠ**

**ಧ್ಯೇಯಗಳು**

1) ಬಂಟರ ಸಂಘದ ದೇಶ ವಿದೇಶ ಪ್ರತಿಷ್ಠೆ, ಪ್ರಸಿದ್ಧಿ ಜನ ಸ್ನೇಹಿ ಕಾರ್ಯಕ್ರಮಗಳು
2) ಶಿಕ್ಷಣ ಕ್ಷೇತ್ರದಲ್ಲಿ ಹಿಂದಿನ ಆಡಳಿತಗಾರರ ದೂರ ದೃಷ್ಟಿ, ಹಿರಿತನವನ್ನು ಮುಂದುವರಿಸಿ ಬಂಟ್ಸ್ ಸಮಾಜದ ವಿದ್ಯಾವಂತ ಯುವಕರನ್ನು ಸಮಾಜ ಮತ್ತು ದೇಶಕ್ಕೆ ಉತ್ತಮ ತಾಂತ್ರಿಕ, ಮತ್ತು ಆಡಳಿತ ರಂಗದಲ್ಲಿ ನಾಯಕತ್ವವನ್ನು ಸೃಷ್ಟಿಸುವ ಹೊಸ ಇತಿಹಾಸವನ್ನು ಬರೆಯಲು ಕಾರ್ಯಸೂಚಿ ಪ್ರೇರಣಾತ್ಮಕ ಕಾರ್ಯಕ್ರಮಗಳು
3) ಬಂಟ ಸಮಾಜದ ಸ್ತ್ರೀ ಶಕ್ತಿ ಸಂವರ್ಧನೆಗೆ ವಿಶೇಷ ಕಾರ್ಯಕ್ರಮಗಳು
4) ಬಂಟ ಯುವಜನ ಜೀವನ ಮಟ್ಟ ಸುಧಾರಣೆಗೆ ಖಾಸಗಿ ಮತ್ತು ಸರಕಾರಿ ಸಂಸ್ಥೆಗಳ ಜೊತೆ ಅತಿ ವಿಶೇಷ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುವಿಕೆ.
5) ಸೃಜನಾತ್ಮಕ,ಕ್ರೀಯಾತ್ಮಕ ಚಿಂತನೆಗೆ ಪ್ರೇರಣೆ
6) ಪ್ರತಿ ಹಳ್ಳಿಯಿಂದ ವಿದ್ಯಾಭ್ಯಾಸ ಮುಗಿಸಿ ರಾಜಧಾನಿಗೆ ಬರುವ ಬಂಟ ಸಮಾಜದ ಯುವಕ ಯುವತಿಯರಿಗೆ ವಸತಿ ಗೃಹದ ಸೌಲಭ್ಯ.
7)ಅನಾಥ ಬಂಟ ಹಿರಿಯರಿಗಾಗಿ ಸಕಲ ಸವಲತ್ತಿನ ಓಲ್ಡ್ ಏಜ್ ಹೋಮ್ ಸ್ಥಾಪನೆ.
8) ಬಂಟರಲ್ಲಿ ಪಾರಂಪರಿಕವಾಗಿ ರಕ್ತಗತವಾಗಿರುವ ಮಾದರಿ ನಾಯತ್ವದ ಗುಣದ ಸಂವರ್ಧನೆಗೆ ಸದಾ ಪ್ರೇರಣೆಯಾಗುವುದು.
9) ಉದ್ಯೋಗ ವೇದಿಕೆ ಮೂಲಕ ವ್ಯಕ್ತಿತ್ವ ವಿಕಸನ, ಕೌಶಲ್ಯ ಅಭಿವೃದ್ಧಿ ತರಬೇತಿ, ವಿವಿಧ ಕ್ಷೇತ್ರದಲ್ಲಿರುವ ಉದ್ಯೋಗ ಅವಕಾಶ, ಉದ್ದಿಮೆ ಅವಕಾಶಗಳ ಬಗ್ಗೆ ಯುವಕ ಯುವತಿಯರಿಗೆ ಮಾಹಿತಿ ಕಾರ್ಯಾಗಾರ, ಸಮ್ಮೇಳನಗಳನ್ನು ಏರ್ಪಡಿಸುವುದು.
10) ಬಂಟ ವಿವಾಹ ವೇದಿಕೆ ಮೂಲಕ ಅಂತರ್ಜಾತಿ ವಿವಾಹವನ್ನು ತಪ್ಪಿಸಿ ಸ್ವಜಾತಿ ವಿವಾಹವನ್ನು ಪ್ರೋತ್ಸಾಹಿಸುವುದು. ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಬಂಟರಲ್ಲಿ ಬಂಟಸಂಸ್ಕಾರ ವನ್ನು ಉಳಿಸಿಕೊಳ್ಳುವುದು

ADVT.

# ಡಾ. ಉಮಾನಾಥ ಶೆಟ್ಟಿ .ವೈ

## ಅಧ್ಯಕ್ಷೀಯ ಅಭ್ಯರ್ಥಿ ಕ್ರಮ ಸಂಖ್ಯೆ : 4



ಸದಸ್ಯತ್ವ ಸಂಖ್ಯೆ 003311

**ಆತ್ಮೀಯ ಸಮಾಜ ಬಾಂಧವರೇ / ಸ್ನೇಹಿತರೆ,**

ದಿನಾಂಕ 28 07 2024 ರಂದು ನಡೆಯಲಿರುವ ಬೆಂಗಳೂರು ಬಂಟರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಆಯ್ಕೆ ಬಯಸಿ ನಾನು ಸಂಘದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ. ತಮ್ಮೆಲ್ಲರನ್ನು ಫೋನ್ ಮೂಲಕ ಸಂಪರ್ಕಿಸಬೇಕೆಂದು ಅಥವಾ ವೈಯಕ್ತಿಕವಾಗಿ ಬೇಟಿಯಾಗಬೇಕೆಂದು ಬಯಸಿದ್ದರೂ ಸಹ ಸಮಯದ ಅಭಾವದಿಂದ ಸಾಧ್ಯವಾಗುತ್ತಿಲ್ಲ ತಾವು ಅನ್ಯತಾ ಭಾವಿಸದೆ ನಾನು ಈ ಮೂಲಕ ಮಾಡುವ ಮನವಿಯನ್ನು ಪರಿಗಣಿಸಿ ನನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಕಿರು ಪರಿಚಯ: ಹುಟ್ಟೂರು: ತಡೆಕಲ್ಲು ಬೆಟ್ಟಿನಮನೆ ಎಳ್ಳಂಪಳ್ಳಿ, ನೀಲಾವರ ಗ್ರಾಮ, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ

ತಾಯಿ: ಬಾರಕೂರು ನಾಗರಮಠ ಜಲಜ ಶೆಟ್ಟಿ ತಂದೆ: ದಿ. ಮುದ್ರಾಡಿ ಸಂಬೆಟ್ಟು ಅಣ್ಣಪ್ಪ ಶೆಟ್ಟಿ

ಪತ್ನಿ: ಪ್ರಮೀಳಾ: ಮಂದಾರ್ತಿ ತಂತ್ರಾಡಿ ಮೆಟ್ಕಲ್ ಮನೆ ಭೋಜ ಕುಮಾರ ಶೆಟ್ಟಿ ಮತ್ತು ಪೇತ್ರಿ ಕುದ್ಕುಂಜೆ ಸರೋಜಿನಿ ಶೆಟ್ಟಿ ಪುತ್ರಿ

ಪುತ್ರಿ: ದಿವಿತಾ ಯು ಶೆಟ್ಟಿ ದ್ವಿತೀಯ ವರ್ಷದ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡುತ್ತಿದ್ದಾಳೆ

ನಾನು ಸುಮಾರು 26 ವರ್ಷಗಳಿಂದ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ಸ್ನೇಹಚಿಂತನೆ ಸಂಪಾದಕೀಯ ಮಂಡಳಿ, ಸಾಂಸ್ಕೃತಿಕ ಹಾಗೂ ಯುವ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದು ತದನಂತರ ತಮ್ಮೆಲ್ಲರ ಆಶೀರ್ವಾದ ಮತ್ತು ಹಾರೈಕೆಯಿಂದ ಎರಡು ಬಾರಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಕಾನೂನು ಹಾಗೂ ಯುವ ವಿಭಾಗದ ಅಧ್ಯಕ್ಷನಾಗಿ ಸಂಘದ ಸದಸ್ಯರ ಉಪಯೋಗಕ್ಕಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಅತ್ಯಂತ ಪ್ರಾಮಾಣಿಕತೆ ಹಾಗೂ ದಕ್ಷತೆಯಿಂದ ಯಶಸ್ವಿಯಾಗಿ ನಿರ್ವಹಿಸಿದ್ದೇನೆ.

ಪ್ರಸ್ತುತ ಚುನಾವಣೆಯಲ್ಲಿ ನನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದಲ್ಲಿ ಸಂಘದ ಎಲ್ಲ ಹಣಕಾಸು ವ್ಯವಹಾರಗಳನ್ನು ಗಣಕೀಕರಣಗೊಳಿಸಿ ನಗದು ರಹಿತ ವ್ಯವಹಾರದ ವ್ಯವಸ್ಥೆಯನ್ನು ಅಭಿವೃದ್ಧಿ ಗೊಳಿಸುವುದು, ಬಂಟ್ಸ್ ಸಂಘ ಆರ್ ಎನ್ ಎಸ್ ವಿದ್ಯಾನಿಕೇತನ ಶಾಲೆಯ ಶಿಕ್ಷಣದ ಗುಣಮಟ್ಟ ವನ್ನು ಹೆಚ್ಚಿಸುವುದು, ಪ್ರತಿವರ್ಷ ಸಂಘದ ಆವರಣದಲ್ಲಿ ಉದ್ಯೋಗ ಮೇಳ ಆಯೋಜಿಸಿ ಯುವಕ ಯುವತಿಯರಿಗೆ ಉದ್ಯೋಗ ಕಲ್ಪಿಸಿಕೊಡುವುದು ಇತ್ಯಾದಿ ಹತ್ತು ಹಲವು ಕಾರ್ಯಕ್ರಮಗಳನ್ನು ಬಂಟ ಭಾಂದವರಿಗೆ ಅನುಕೂಲವಾಗುವಂತೆ ಅನುಷ್ಠಾನಕ್ಕೆ ತರುತ್ತೇನೆ. ಸಂಘದ ಆಡಳಿತದ ಪಾರದರ್ಶತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಶಿಕ್ಷಣ, ಹಣಕಾಸು, ಕಾನೂನು, ಸಮಾಜ ಸೇವೆ, ತಂತಜ್ಞಾನ, ಆಡಳಿತ ಹಾಗೂ ಇನ್ನಿತರ ಕ್ಷೇತ್ರಗಳ ಪರಿಣತರ ತಂಡವನ್ನು ರಚಿಸಿ ಆಗಾಗ ಅವರ ಸಲಹೆ ಸೂಚನೆಗಳನ್ನು ಪಡೆದು ಸಂಘದ ವಿವಿಧ ಕಾರ್ಯ ಯೋಜನೆಗಳನ್ನು ರೂಪಿಸುತ್ತೇನೆ. ಈ ನಿಟ್ಟಿನಲ್ಲಿ ಸಂಘದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು ತಮ್ಮ ಮತ್ತು ತಮ್ಮೆಲ್ಲ ಹಿತೈಷಿ ಸದಸ್ಯ ಭಾಂದವರ ಮಾರ್ಗದರ್ಶನ ಹಾಗೂ ಬೆಂಬಲವನ್ನು ಈ ಮೂಲಕ ಬಯಸುತ್ತೇನೆ.

ಸಹೃದಯಿ ಸಮಾಜ ಭಾಂದವರಲ್ಲಿ ಕೈಜೋಡಿಸಿ ವಿನಂತಿಸಿಕೊಳ್ಳುತ್ತೇನೆಂದರೆ ಸಂಘದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಶುದ್ಧ ಹಸ್ತದ ಪ್ರಾಮಾಣಿಕ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿ ಬಂಟರ ಸಂಘದ ಏಳಿಗೆಗಾಗಿ ಸಹಕರಿಸಿ ಹಾಗೂ ಪ್ರಾಮಾಣಿಕ, ದಕ್ಷ , ಪಾರದರ್ಶಕ, ನಿಷ್ಪಕ್ಷಪಾತ ಆಡಳಿತದ ದೃಷ್ಟಿಯಿಂದ ಸಂಘದ ಹಿರಿಯರ, ಅನುಭವಿಗಳ, ವಿವಿಧ ಕ್ಷೇತ್ರದ ಪರಿಣಿತರ ಮಾರ್ಗದರ್ಶನ ಪಡೆದು ಸಂಘದ ಸೇವಕನಂತೆ ಕೆಲಸ ಮಾಡಲು ನನಗೆ ಒಂದು ಅವಕಾಶ ಕಲ್ಪಿಸಿಕೊಟ್ಟು ಸಂಘದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ವಿನಂಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ

ಇಂತಿ ನಿಮ್ಮ ಸೇವಾಕಾಂಕ್ಷಿ,

**ಡಾ. ಉಮಾನಾಥ ಶೆಟ್ಟಿ .ವೈ** ಎಂ.ಎಸ್.ಡಬ್ಲ್ಯೂ, ಎಂ.ಎ, ಎಲ್.ಎಲ್.ಬಿ, ಪಿಜಿಡಿಐಆರ್‌ಪಿಎಂ, ಡಿಬಿಎ, ಡಿ ಎಲ್ ಎಲ್, ಪಿ ಹೆಚ್ ಡಿ

**Candidate for President Post Dr. Umanatha Shetty .Y** MSW, MA, LLB, PGDIRPM, DBA, DLL, PhD

**Respected Members of the Sangha,**

Iam Contesting for the post of **President Bunts' Sangha**, Bangalore for the elections to be held on **28.07.2024**. I have been actively associated with Sangha's activities for more than **26 years** and served Sangha in various Sub committees and in two terms I was elected as **Executive Committee Member and served as Chairman- Youth Wing & Legal Cell**. During this period we have successfully implemented various programmes for the benefit of the Sangha Members. Kindly give me an opportunity to serve as President of Sangha to work on laid down objectives of the Sangha and to ensure transparency & efficiency in the administration.

ADVT.

# ಬಂಟರ ಸಂಘ ಬೆಂಗಳೂರು – ಚುನಾವಣೆ

**2024–2026**

28–07–2024ನೇ ಭಾನುವಾರ

ಕ್ರ.ಸಂ **01**



## ಕರುಣಾಕರ ಶೆಟ್ಟಿ ಬನ್ನಾಡಿ

**ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ**

ನಾನು **ಬನ್ನಾಡಿ ಕಂಬಳಗದ್ದೆ ಮನೆ ಕರುಣಾಕರ ಶೆಟ್ಟಿ,** ನಿವೃತ್ತ ಸಹಾಯಕ ಮಹಾ ಪ್ರಬಂಧಕರು ವಿಜಯ ಬ್ಯಾಂಕ್, ಇದೇ ಜುಲೈ 28 ರಂದು ನಡೆಯುವ ನಮ್ಮ ಸಂಘದ ಚುನಾವಣೆಯಲ್ಲಿ **ಉಪಾಧ್ಯಕ್ಷ** ಸ್ಥಾನಕ್ಕೆ ಸ್ಪರ್ಧಿಸಿದ್ದು ತಮ್ಮೆಲ್ಲರ ಅಮೂಲ್ಯವಾದ ಮತಗಳನ್ನು ಯಾಚಿಸುತ್ತಿದ್ದೇನೆ.

ನಾನು ಈ ಹಿಂದೆ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದು ನಮ್ಮ ಸಂಘಕ್ಕೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿರುತ್ತೇನೆ. ನಾನು ಸತ್ಯ, ಧರ್ಮ, ಪ್ರಾಮಾಣಿಕತೆ ಹಾಗೂ ಲೆಕ್ಕ ಬದ್ಧತೆಯಿಂದ ಸಂಘದ ಹಿತಾಸಕ್ತಿಯನ್ನು ಕಾಪಾಡುವ ಕೆಲಸ ಮಾಡುತ್ತೇನೆಂದು ಈ ಮೂಲಕ ತಮಗೆ ತಿಳಿಸುತ್ತಿದ್ದೇನೆ.

ತಾವುಗಳು ದಯಮಾಡಿ ನನ್ನ ಉಮೇದ್ವಾರಿಕೆಯನ್ನು ಪುರಸ್ಕರಿಸಿ ನನ್ನನ್ನು ಜಯಶೀಲನನ್ನಾಗಿ ಮಾಡಬೇಕೆಂದು ಕೋರುತ್ತಿದ್ದೇನೆ.

**ಕರುಣಾಕರ ಶೆಟ್ಟಿ, ಬನ್ನಾಡಿ**

**I, KARUNAKARA SHETTY BANNADI,**
Retired ASSISTANT GENERAL MANAGER, Vijaya Bank
have contested for the post of **VICE-PRESIDENT** in the election to be held on 28-07-2024, I request you to cast your valuable vote in my favour.

| ಕ್ರ. ಸಂಖ್ಯೆ | ಅಭ್ಯರ್ಥಿಯ ಹೆಸರು | | |
|---|---|---|---|
| 1 | ಕರುಣಾಕರ ಶೆಟ್ಟಿ ಬನ್ನಾಡಿ<br>KARUNAKARA SHETTY BANNADI |  |  VOTE |

ಇಂತಿ ತಮ್ಮ ವಿಶ್ವಾಸಿ,
**ಕರುಣಾಕರ ಶೆಟ್ಟಿ ಬನ್ನಾಡಿ**

ಮೊ : 98440 33802

ADVT.



# ಶ್ರೀಮತಿ ಕಾಂತಿ ಶೆಟ್ಟಿ

**Mem No - LM005741**

**ಆತ್ಮೀಯ ಸಮಾಜ ಬಾಂಧವರೇ**

ಬಂಟರ ಸಂಘ ಬೆಂಗಳೂರು ಇದರ ಈ ಬಾರಿಯ ಆಡಳಿತ ಮಂಡಳಿ ಚುನಾವಣೆ 28–07–2024 ರಂದು ನಡೆಯಲಿದ್ದು ನಾನು ಮಹಿಳಾ ಮೀಸಲಾತಿಯ **'ಉಪಾಧ್ಯಕ್ಷೆ'** ಸ್ಥಾನಕ್ಕೆ **(VICE PRESIDENT)** ಆಯ್ಕೆ ಬಯಸಿ ಉಮೇದುವಾರಿಕೆಯನ್ನು ಸಲ್ಲಿಸಿರುತ್ತೇನೆ.

ಮೂಲತಃ ಶಿರ್ವ ನಡಿಬೆಟ್ಟಿನ ಕುಟುಂಬದವಳಾದ ನಾನು ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಜನಿಸಿ, ಪದವಿವರೆಗಿನ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲಿ ಮುಗಿಸಿರುತ್ತೇನೆ. ಪ್ರಸಕ್ತ ಬೆಂಗಳೂರಿನಲ್ಲಿ **'ಏರ್‌ಕಾಮ್ ಸೆಲ್ಯೂಷನ್ಸ್ ಪ್ರೈ. ಲಿ.'** ಟೆಲಿಕಾಂ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿಯಾಗಿ ಸ್ವಂತ ಉದ್ಯಮಿಯಾಗಿರುತ್ತೇನೆ.

- 2012ರಿಂದ 'ನಮ್ಮ ಕುಟೀರ' ಸ್ವಯಂ ಸೇವಾ ಸಂಸ್ಥೆಯ ಸಂಸ್ಥಾಪಕ ಟ್ರಸ್ಟಿ
- 2000 ರಿಂದ ವ್ಯವಸ್ಥಾಪಕ ನಿರ್ದೇಶಕರು, 'ಏರ್‌ಕಾಮ್ ಸೆಲ್ಯೂಷನ್ಸ್ ಪ್ರೈ. ಲಿ.'
- 2014–2016 ಕಾರ್ಯಕಾರಿ ಸಮಿತಿ ಸದಸ್ಯೆ – ಬಂಟರ ಸಂಘ ಬೆಂಗಳೂರು, ವಿವಾಹ ವೇದಿಕೆ ಅಧ್ಯಕ್ಷೆ
- 2016–2018 ಜೊತೆ ಕಾರ್ಯದರ್ಶಿ – ಬಂಟರ ಸಂಘ ಬೆಂಗಳೂರು, ಅಧ್ಯಕ್ಷೆ, ವೆಬ್‌ಸೈಟ್ ಕಮಿಟಿ ಮತ್ತು ಸದಸ್ಯತ್ವ ಸಮಿತಿ
- 2016–19 ಕನ್ನಡ ಸಾಹಿತ್ಯ ಪರಿಷತ್ ನ ರಾಜ್ಯ ಸಮಿತಿಯ ಸಹ ಸಂಚಾಲಕಿ (ಉದ್ಯೋಗ ಐಟಿ)
- ತುಳು ಕೂಟ ಬೆಂಗಳೂರು, 'ತುಳುವೆರೆಂಕುಲು' ಸಂಸ್ಥೆ, ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ – ಅಜೀವ ಸದಸ್ಯೆ
- **2019–2022 ಕರ್ನಾಟಕ ರಾಜ್ಯ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯೆ**
- 2019–2022 ಕೃಷ್ಣ ಕಾವೇರಿ ಸೊಸೈಟಿಯಲ್ಲಿ ನಿರ್ದೇಶಕಿ

**ಸಮಾಜ ಸೇವೆಗೆ ಸಂದ ಪ್ರಶಸ್ತಿಗಳು:**

- **2018ರಲ್ಲಿ ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ**
- **2019ರಲ್ಲಿ ತುಳುನಾಡ ಸೌಗಂಧಿಕ ಪ್ರಶಸ್ತಿ**
- **2020ರಲ್ಲಿ ಅರಬ್ ದೇಶದ ಚೇಂಬರ್ ಆಫ್ ಕಾಮರ್ಸ್ ನೀಡುವ ಕರೋನಾ ವಾರಿಯರ್ಸ್ ಆಫ್ ಇಂಡಿಯಾ ಪ್ರಶಸ್ತಿ,**
- **2020ರಲ್ಲಿ ಸ್ವಸ್ತಿಶ್ರೀ ರಾಜ್ಯ ಪ್ರಶಸ್ತಿ,**
- **2021ರಲ್ಲಿ ನಾರಿ ಶಕ್ತಿ ಪ್ರಶಸ್ತಿ, ಸಮಾಜ ಸೇವಾ ರತ್ನ ಪ್ರಶಸ್ತಿ**
- **2021–22ರಲ್ಲಿ ಮಹಿಳಾ ವಾರಿಯರ್ ಪ್ರಶಸ್ತಿ**
- **2022 ಇಂಡಿಯನ್ ಎಂಪೈರ್ ಯೂನಿವರ್ಸಿಟಿ ವತಿಯಿಂದ ಸಾಮಾಜಿಕ ಸೇವೆಗಾಗಿ ಗೌರವ ಡಾಕ್ಟರೇಟ್**
- **2023ರಲ್ಲಿ ಅಚೀವರ್ಸ್ ಆಫ್ ಬೆಂಗಳೂರು ಅವಾರ್ಡ್, ಟೈಮ್ಸ್ ಗ್ರೂಪ್ಸ್ ಇವರಿಂದ**
- **2024ರಲ್ಲಿ ಬೆಂಗಳೂರು ರತ್ನ – ವಿಜಯವಾಣಿ ಸಮೂಹ ಸಂಸ್ಥೆಯವರಿಂದ**

ಕಳೆದ 24 ವರುಷಗಳಿಂದ ಸಂಘದ ಸದಸ್ಯೆಯಾಗಿ ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆ. ತಮ್ಮೆಲ್ಲರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಮಾರ್ಗದರ್ಶನ ಪಡೆಯಲು ಕಷ್ಟ ಸಾಧ್ಯವಾದ್ದರಿಂದ ನನ್ನ ಈ ಮನವಿಯನ್ನೇ ವೈಯಕ್ತಿಕವೆಂದು ಪರಿಗಣಿಸಿ ತಮ್ಮ ಹಾಗೂ ಬಂಧು–ಮಿತ್ರರ ಅತ್ಯಮೂಲ್ಯ ಮತವನ್ನು ನನಗೆ ನೀಡಿ ಹೆಚ್ಚಿನ ಸಮಾಜ ಸೇವೆಗೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

| ಕ್ರ. ಸಂಖ್ಯೆ | ಅಭ್ಯರ್ಥಿಯ ಹೆಸರು | | |
|---|---|---|---|
| 1 | ಕಾಂತಿ ಶೆಟ್ಟಿ<br>KANTHI SHETTY |  | VOTE |

ತಮ್ಮ ವಿದೇಯ ಸೇವಾಕಾಂಕ್ಷಿ.

**ಶ್ರೀಮತಿ ಕಾಂತಿ ಶೆಟ್ಟಿ**

**Mob: 99450 68393, E-mail ; kanthishetty.airtel@gmai.com**

ADVT.

# ಬಂಟರ ಸಂಘ ಬೆಂಗಳೂರು

**ಚುನಾವಣೆ 2024-26**

PLEASE SUPPORT TEAM CA ASHOK SHETTY



## ಅಶೋಕ್ ಕುಮಾರ್ ಶೆಟ್ಟಿ ಎಚ್.

ಖಜಾಂಚಿ ಸ್ಥಾನಕ್ಕೆ (Treasurer )

Membership No. CL002761

**28** JULY 2024 SUNDAY

**ಆತ್ಮೀಯ ಸಮಾಜ ಬಾಂಧವರೇ,**

ನಾನು 28.07.2024 ರಂದು ನಡೆಯಲಿರುವ ಬಂಟರ ಸಂಘದ ಚುನಾವಣೆಯಲ್ಲಿ **ಖಜಾಂಚಿ** ಸ್ಥಾನಕ್ಕೆ **(Treasurer)** ಸ್ಪರ್ಧಿಸುತ್ತಿದ್ದೇನೆ.

ಶ್ರೀಮತಿ ಜಲಜಾಕ್ಷಿ ಶೆಟ್ಟಿ ಹೆಗ್ಗುಂಜೆ ಹಾಗೂ ದಿ. ಟಿ. ಮಹಾಬಲ ಶೆಟ್ಟಿ, ಮಾಲಾಡಿ, ಇವರ ಪುತ್ರನಾಗುದ್ದು, ರಮಾದೇವಿ ಶೆಟ್ಟಿ (ದಿ. ಶಾನಾಡಿ ಚಿಕ್ಕಮ್ಮ ಶೆಟ್ಟಿ ಹಾಗೂ ದಿ. ಹೊಸಮರ ಸಂಜೀವ ಶೆಟ್ಟಿ ಯವರ ಪುತ್ರಿ) ಯವರನ್ನು ವಿವಾಹ ಆಗಿರುತ್ತೇನೆ.

ನನ್ನ ಪ್ರಾಥಾಮಿಕ, ಪ್ರೌಢ ಹಾಗೂ ಪಿ.ಯು.ಸಿ. ಯನ್ನು ಮಂದರ್ತಿ, ತೆಕ್ಕಟ್ಟೆ ಹಾಗೂ ಉಡುಪಿಯಲ್ಲಿ ಮುಗಿಸಿ, ಎಂ.ಸಿ.ಇ ಹಾಸನದಲ್ಲಿ **Architecture** ಪದವಿಯನ್ನು ಪಡೆದಿರುತ್ತೇನೆ.

ಪ್ರಸ್ತುತ ಜಯನಗರದಲ್ಲಿ **M/s "Process Architects** ಎಂಬ ಸಂಸ್ಥೆಯನ್ನು ಹೊಂದಿದ್ದು ಹಲವಾರು ಮನೆಗಳು, ಅಪಾರ್ಟಮೆಂಟ್ಸ್‌ಗಳು, ಕಛೇರಿಗಳು ಮತ್ತು ವಾಣಿಜ್ಯ ಸಂಕೀರ್ಣಗಳು ಹಾಗೂ ವಿದ್ಯಾಸಂಸ್ಥೆಗಳನ್ನು ಕರ್ನಾಟಕದಾದ್ಯಂತ ಸೃಜನಶೀಲವಾಗಿ ವಿನ್ಯಾಸಗೊಳಿಸಿರುವ ತೃಪ್ತಿ ಇದೆ.

ಲಯನ್ಸ್ ಅಂತರಾಷ್ಟ್ರೀಯ ಸೇವಾ ಸಂಸ್ಥೆಯ ಪ್ರಶಾಂತನಗರ ಕ್ಲಬ್ ಸ್ಥಾಪಕ ಸದಸ್ಯನಾಗಿದ್ದು, ಕಳೆದ 29 ವರ್ಷಗಳಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸಿ ಅನೇಕ ಸೃಜನಶೀಲ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸಿದ ಅನುಭವ ಹೊಂದಿದ್ದೇನೆ. ಈ ಸೇವೆಗಳಿಗಾಗಿ **Excellent President, Best ZMA, Outstanding Zone- Chairman, Region Chairman** ನಂತಹ ಹಲವು ಪ್ರಶಸ್ತಿಗಳನ್ನು ಪಡೆದಿರುವುದು ನನ್ನ ಕರ್ತವ್ಯ ನಿಷ್ಠೆ ಹಾಗೂ ಕಾರ್ಯಕ್ಷಮತೆಗೆ ಸಾಕ್ಷಿ.

ಸುಮಾರು 30 ವರ್ಷಗಳಿಂದ ಬಂಟರ ಸಂಘದ ಸಕ್ರೀಯ ಸದಸ್ಯನಾಗಿದ್ದು, ನಾನು ಸ್ವತಃ ಆರ್ಕಿಟೆಕ್ಟ್ ಆಗಿರುವುದರಿಂದ ನನ್ನ ಪ್ರೊಫೆಶನಲ್ ಅನುಭವಗಳನ್ನು ಬಳಸಿಕೊಂಡು 2018-2022 ರ ಅವದಿಯಲ್ಲಿ Project Committee ಯ Convener ಆಗಿದ್ದು **RNS-II** ಕಟ್ಟಡವನ್ನು ಅತ್ಯಂತ ಪಾರದರ್ಶಕವಾಗಿ ಹಾಗೂ ಉತ್ಕೃಷ್ಟ ಗುಣಮಟ್ಟದ ಸುಂದರ ವಿನ್ಯಾಸದ ಕಟ್ಟಡವನ್ನು ಪೂರ್ಣಗೊಳಿಸುವಲ್ಲಿ ನನಗೂ ಈ ಸದಾವಕಾಶ ದೊರಕಿರುವುದು ನನ್ನ ಭಾಗ್ಯ.

ಈ ಬಾರಿಯ ಬಂಟರ ಸಂಘದ ಚುನಾವಣೆಯಲ್ಲಿ ಖಜಾಂಚಿ ಯಾಗಿ ಸೇವೆ ಸಲ್ಲಿಸಲು ಅವಕಾಶ ನೀಡಬೇಕೆಂದು ನಮ್ರತೆಯಿಂದ ವಿನಂತಿಸುತ್ತೇನೆ.

| ಕ್ರ. ಸಂಖ್ಯೆ | ಅಭ್ಯರ್ಥಿಯ ಹೆಸರು | | |
|---|---|---|---|
| 1 | ಅಶೋಕ್ ಕುಮಾರ್ ಶೆಟ್ಟಿ ಎಚ್<br>ASHOK KUMAR SHETTY H. |  | VOTE |

ತಮ್ಮ ವಿದೇಯ ಸೇವಾಕಾಂಕ್ಷಿ.

**ಅಶೋಕ್ ಕುಮಾರ್ ಶೆಟ್ಟಿ ಎಚ್.**

ARCHITECT

Mob : 9880594633

**TEAM CA ASHOK SHETTY**

ADVT.

# ಬಂಟರ ಸಂಘ, ಬೆಂಗಳೂರು, ಚುನಾವಣೆ 2024–26

## ಆತ್ಮೀಯ ಸದಸ್ಯರಲ್ಲಿ ವಿನಮ್ರ ಮನವಿ

ಕ್ರಮ ಸಂಖ್ಯೆ

02



**ಕೆ. ರತ್ನಾಕರ ಶೆಟ್ಟಿ**
ಮೊ.: 9945712505
ಖಜಾಂಚಿ ಸ್ಥಾನದ ಅಭ್ಯರ್ಥಿ
ಮಾಜಿ ಚುನಾಯಿತ ಕಾರ್ಯಕಾರಿ ಸಮಿತಿ ಸದಸ್ಯ
2014–16 ಮತ್ತು 2016–18

2024–26 ಸಾಲಿನ ಚುನಾವಣೆಗೆ ನಿಮಗೆಲ್ಲ ತಿಳಿದಿರುವಂತೆ ಸಂಘದ ವಿವಿಧ ಹಂತಗಳಲ್ಲಿ, ಅನೇಕ ಗಣ್ಯರೊಡನೆ ಸೇರಿ ನಾನು ಸಂಘಕ್ಕೆ ಪ್ರಾಮಾಣಿಕ ಸೇವೆ ಸಲ್ಲಿಸಿದ್ದೇನೆ. ಆದರೂ ನಾನು ಸಂಘಕ್ಕೆ ಸಲ್ಲಿಸಿದ ಅಳಿಲು ಸೇವೆಯನ್ನು ನಿಮಗೆಲ್ಲರಿಗೂ ಮತ್ತು ಬಹುಮುಖ್ಯವಾಗಿ ಹೊಸದಾಗಿ ಸದಸ್ಯರಾದವರ ಗಮನಕ್ಕೆ ತರಬಯಸುತ್ತೇನೆ.

2014–16ನೇ ಸಾಲಿನಲ್ಲಿ ಡಾ: ನರೇಶ್ ಶೆಟ್ಟಿ ಇವರು ಸಂಘದ ಅಧ್ಯಕ್ಷರಾಗಿರುವ ಅವಧಿಯಲ್ಲಿ ಸಂಘದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿಯ ಅಧ್ಯಕ್ಷನಾಗಿ ದಾನಿಗಳ ನೆರವು ಮತ್ತು ಸಂಘದ ಸದಸ್ಯರ ಸಹಕಾರದೊಂದಿಗೆ ಮಾಡಿದ ಕಾರ್ಯಗಳ ಪಕ್ಷಿನೋಟ.

5 ಮಣಿ, 2 ಬೆಳ್ಳಿ ಕಾಲು ದೀಪ, ದೇಗುಲದ ಆವರಣದಲ್ಲಿ ಇಂಟರ್‌ಲಾಕ್ ಮತ್ತು ಮೆಟ್ರೋನಿಗಮದ ಸಹಯೋಗದಲ್ಲಿ ಗ್ರಾನೈಟ್ ಅಳವಡಿಕೆ, 2 ಕಿಲೋ 913 ಗ್ರಾಂ ಬೆಳ್ಳಿ ಪ್ರಭಾವಳಿ, 1 ಕಿಲೋ 866 ಗ್ರಾಂ ಬೆಳ್ಳಿಯ ಪಾಣಿ ಪೀಠ, 1362 ಗ್ರಾಂ ತೂಕವುಳ್ಳ ಇಲಿ, ವಾಹನ ಕವಚ, 2 ಕಿಲೋ ತೂಕದಲ್ಲಿ ಗಣಪತಿಗೆ ಬೆಳ್ಳಿ ಕವಚ, ಶಾಶ್ವತ ಪೂಜೆಗೆ 82 ಭಕ್ತಾಧಿಗಳ ನೊಂದಣಿ, ಕಬ್ಬಿಣದ ಕಪಾಟು, ಚಿನ್ನದ ಸಟ್ಟಿಗೆ ಮಾಡಿಸಲು ರೂ.1,63,000/– ಸಂಗ್ರಹ, ಮುಂದಿನ ಎಲ್ಲಾ ವಾರ್ಷಿಕೋತ್ಸವದ ಪ್ರಸಾದ ಭೋಜನಕ್ಕೆ ಶಾಶ್ವತ ವ್ಯವಸ್ಥೆ, ಎರಡೂವರೆ ಅಡಿ ಎತ್ತರದ ಕಾಣಿಕೆ ಹುಂಡಿ, ಮೇಲ್ಕಂಡ ಎಲ್ಲಾ ಕಾರ್ಯಗಳಿಗೆ ಅಂದಾಜು ರೂ.6,50,000 ವೆಚ್ಚವಾಗಿದೆ, ಅಲ್ಲದೆ ರೂ, 85,000/– ಉಳಿಕೆ ಹಣ ಖಾತೆಯಲ್ಲಿತ್ತು.


2016–18ನೇ ಸಾಲ್ಲಿನಲ್ಲಿ ಶ್ರೀ ಚಂದ್ರಹಾಸ ರೈ ಅಧ್ಯಕ್ಷರಾಗಿ ನಾನು ಶ್ರೀ ವರಸಿದ್ಧಿ ವಿನಾಯಕ ಮಂದಿರದ ಸಮಿತಿಯ ಅಧ್ಯಕ್ಷನಾಗಿ ದಾನಿಗಳ ನೆರವು ಮತ್ತು ಸಂಘದ ಸದಸ್ಯರ ಸಹಕಾರದಿಂದ ಮಾಡಿಸಿದ ಕಾರ್ಯಗಳ ಸಂಕ್ಷಿಪ್ತ ವಿವರ.

ನಾನು ಅಧ್ಯಕ್ಷನಾಗಿ ಸಮಿತಿಯ ನಿತ್ಯ ಪೂಜೆಯ ವ್ಯವಸ್ಥೆಯೊಂದಿಗೆ ಗಣೇಶ ಚತುರ್ಥಿ, ಸಂಕಷ್ಟ, ಸೌರಮಾನ ಯುಗಾದಿ (ಬಿಸು) ಮಂದಿರದ ವಾರ್ಷಿಕೋತ್ಸವ ಸಮಾರಂಭವನ್ನು ಶ್ರದ್ಧೆ ಹಾಗೂ ಭಕ್ತಿಯಿಂದ ನಡೆಸಿಕೊಂಡು ಬಂದಿರುತ್ತದೆ.

ದಿನಾಂಕ 14–04–2017 ರಂದು ಸಂಘದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕನಿಗೆ ಚಿನ್ನದ ಸಟ್ಟಿಗೆಯನ್ನು ವಿಜೃಂಭಣೆಯಿಂದ ಅರ್ಪಿಸಲಾಯಿತು.

ದಿನಾಂಕ 25–08–2017 ರಂದು ಶ್ರೀ ವರಸಿದ್ಧಿ ವಿನಾಯಕ ಮಂದಿರದಲ್ಲಿ ಗಣೇಶ ಚತುರ್ಥಿಯನ್ನು ಆಚರಿಸಲಾಯಿತು. ನಂತರ ಡಾ: ವಿದ್ಯಾಭೂಷಣ ಸ್ವಾಮಿಜಿಯವರಿಂದ ಭಕ್ತಿಗಾನ ಸುಧೆ ಕಾರ್ಯಕ್ರಮವು ಜನ ಮನ ಸೂರೆಗೊಂಡಿತು.

ADVT.



ಸಂಘದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ಮಂದಿರದಲ್ಲಿ ದಿನಾಂಕ 14–04–2018 ರಂದು ಪೇಜಾವರಶ್ರೀ ಅಧೋಕ್ಷಜ ಮಠದ ಹಿರಿಯ ಯತಿವರ್ಯರಾದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಶ್ರೀ ವರಸಿದ್ಧಿ ವಿನಾಯಕ ದೇವರ ಸನ್ನಿಧಾನಕ್ಕೆ ರಜತದ್ವಾರ ಹಾಗೂ ಪ್ರಾಣ ಪೀಠವನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಲಾಯಿತು.

ಕಳೆದ 25 ವರ್ಷಗಳಿಂದ ಸಂಘದ ಚಟುವಟಿಕೆಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಹಲವು ಉಪಸಮಿತಿಗಳಲ್ಲೂ ಕಾರ್ಯ ನಿರ್ವಹಿಸಿದ್ದೇನೆ. ಶ್ರೀ ಭಗವಾನ್‌ದಾಸ ರೈ ಮತ್ತು ಟಿ. ಅಮರನಾಥ ಹೆಗ್ಡೆ ಇವರ ಅಧ್ಯಕ್ಷತೆಯ ಅವಧಿಯಲ್ಲಿ ಶ್ರೀ ಭೋಜರಾಜ ಶೆಟ್ಟಿ ಇವರ ಮುಂದಾಳತ್ವದಲ್ಲಿ ಪ್ರಾರ್ಥನಾ ಮಂದಿರದ ಸಂಚಾಲಕನಾಗಿಯೂ ಸೇವೆ ಸಲ್ಲಿಸಿದ್ದೇನೆ.

ಉಪೇಂದ್ರ ಶೆಟ್ಟಿ ಇವರ ಅಧ್ಯಕ್ಷತೆಯ ಅವಧಿಯಲ್ಲಿ ಪ್ರಾರ್ಥನಾ ಮಂದಿರದ ಸಲಹೆಗಾರನಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿ ಕೈಲಾದ ಮಟ್ಟಿಗೆ ದೇಣಿಗೆಯನ್ನು ನೀಡಿದ್ದೇನೆ.

ಎಸ್.ಪಿ.ವೈ.ಎಸ್.ಎಸ್. (SPYSS) 1980 ರಿಂದ ಉಚಿತ ಯೋಗ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ(ರಿ) ಕರ್ನಾಟಕ ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ತುಮಕೂರು ಈ ಸಂಸ್ಥೆಯ ಶಾಖೆಗಳಲ್ಲಿ ಉಚಿತ ಯೋಗ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ಕರ್ನಾಟಕ ಹೋಟೇಲ್ ಮತ್ತು ಉಪಾಹಾರ ಮಂದಿರಗಳ ಸಂಘದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ನಿಕಟಪೂರ್ವ ಚುನಾವಣೆಯಲ್ಲಿ ಪರಾಜಿತ ಅಭ್ಯರ್ಥಿಯಾದ ನಾನು ನಮ್ಮ ಸಂಘದ 2024–26ನೇ ಸಾಲಿನ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಖಜಾಂಚಿ ಸ್ಥಾನಕ್ಕೆ ಸ್ಪಧಿಸುತ್ತಿದ್ದು, ಕಳೆದ 25 ವರ್ಷಗಳಿಂದ ಸಂಘಕ್ಕೆ ಮತ್ತು ಶ್ರೀ ವರಸಿದ್ಧಿ ದಿನಾಯಕ ದೇಗುಲಕ್ಕೆ ಸಲ್ಲಿಸಿದ ನನ್ನ ಅಳಿಲು ಸೇವೆಯನ್ನು ಪರಿಗಣಿಸಿ, ನಮ್ಮ ಸಮಾಜದ ಸೇವೆಗಾಗಿ ಸದಾ ಖಾತರಿಸುವ ನನಗೆ ತಾವೆಲ್ಲರೂ ಆರ್ಶಿರ್ವದಿಸಬೇಕಾಗಿ ಆತ್ಮೀಯತೆಯಿಂದ ಪ್ರಾರ್ಥಿಸುತ್ತಿದ್ದೇನೆ.

**ತಮ್ಮ ಆತ್ಮೀಯ ವಿಶ್ವಾಸಿ, ಕೆ. ರತ್ನಾಕರ ಶೆಟ್ಟಿ**

ADVT.



# ಸಂತೋಷ್ ಶೆಟ್ಟಿ ಜೆ.

**Mem No - CL003781**

**ಶಿಕ್ಷಣ:** ನಿಟ್ಟೆ ವಿದ್ಯಾಸಂಸ್ಥೆಯಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮೊ ಪದವಿ
ಔದ್ಯೋಗಿಕ ಬದುಕು : 30 ವರ್ಷಗಳ ಸೇವಾ ಅನುಭವದೊಂದಿಗೆ
ಪ್ರಸಕ್ತ **ಯುನಿವರ್ಸಲ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಆಡಳಿತಾಧಿಕಾರಿಯಾಗಿ** ಸೇವೆ.

- **ಕನ್ನಡ ಸಾಹಿತ್ಯ ಪರಿಷತ್– ಅಜೀವ ಸದಸ್ಯ**
- **ಕನ್ನಡ ಕರಾವಳಿ ವೇದಿಕೆ – ಸಂಘಟನೆ ಕಾರ್ಯದರ್ಶಿ**
- **ನಿಟ್ಟೆ ವಿದ್ಯೆ ಸಂಸ್ಥೆಯಲ್ಲಿ – ಎಬಿವಿಪಿಯ ಸಂಸ್ಥಾಪಕ ಅಧ್ಯಕ್ಷ**
- **ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ವೈಟ್‌ಲಿಫ್ಟರ್ ಅಸೋಸಿಯೇಷನ್ – ಉಪಾಧ್ಯಕ್ಷ**

**ಪ್ರಥಮ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ**

**PLEASE ELECT**

## SANTHOSH SHETTY J
## FOR THE POST OF First VICE-PRESIDENT




**ಬಂಟರ ಸಂಘ ಬೆಂಗಳೂರು – ನಿರ್ವಹಿಸಿರುವ ಜವಾಬ್ದಾರಿಗಳು**

**1994** : ಯುವ ವಿಭಾಗದ ಸದಸ್ಯನಾಗಿ ಸಂಘದ ಚಟುವಟಿಕೆಗಳಲ್ಲಿ ಸೇರ್ಪಡೆ.

**2001–04** : **ಯುವ ವಿಭಾಗದ ಕಾರ್ಯದರ್ಶಿ**

**2004–06** : **ಕಾರ್ಯಕಾರಿ ಸಮಿತಿ ಸದಸ್ಯ** – ಕ್ರೀಡಾ ಸಮಿತಿ ಸಂಚಾಲಕ

**2006–08** : **ಕಾರ್ಯಕಾರಿ ಸಮಿತಿ ಸದಸ್ಯ** – ಕ್ರೀಡಾ ಸಮಿತಿ ಅಧ್ಯಕ್ಷ.

**2008–10** : ವಿದ್ಯಾರ್ಥಿವೇತನ ಸಮಿತಿ ಸಂಚಾಲಕ, ಕ್ರೀಡಾ ಸಮಿತಿ ಸದಸ್ಯ ಮತ್ತು ಡೈರೆಕ್ಟರಿ ಸಮಿತಿ (Member of Directory) ಸಂಚಾಲಕ – ಸಂಘದಲ್ಲಿ ಪ್ರಥಮ ಬಾರಿಗೆ ವರ್ಣರಂಜಿತ ಸದಸ್ಯತ್ವ ಕೈಪಿಡಿ ನಿರ್ಮಾಣ.

**2012–14** : **ಜೊತೆ ಕಾರ್ಯದರ್ಶಿ,** ಸಂಘದ ಮುಖವಾಣಿ "ಸ್ನೇಹ ಚಿಂತನೆ" ಸಮಿತಿ ಸಂಚಾಲಕರಾಗಿ ಕಾರ್ಯ ನಿರ್ವಹಿಸಿ ಸಂಘಕ್ಕೆ ಅತಿ ಹೆಚ್ಚು ಸದಸ್ಯರ ನೋಂದಾವಣೆ.

**2016–18** : **ಗೌ. ಕಾರ್ಯದರ್ಶಿ, ಬಿ.ಎಸ್. ಆರ್.ಎನ್.ಎಸ್ ಶಾಲಾ ಆಡಳಿತ ಮಂಡಳಿಯ ಸಂಚಾಲಕ**

ಸಂಘದ ಚಟುವಟಿಕೆಗಳಲ್ಲಿ ಕಳೆದ 30 ವರ್ಷಗಳಿಂದ ಸಕ್ರೀಯವಾಗಿ ಬಾಗವಹಿಸುತ್ತಿದ್ದು, ಯುವ ವಿಭಾಗದ ಕಾರ್ಯದರ್ಶಿಯಾಗಿ, ಎರಡು ಅವಧಿಗೆ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಜೊತೆ ಕಾರ್ಯದರ್ಶಿಯಾಗಿ, ಗೌ.ಕಾರ್ಯದರ್ಶಿಯಾಗಿ ಸಮಾಜಮುಖಿಯಾಗಿ ಅತ್ಯಂತ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ್ದೇನೆ.

ಸಂಘದ ಬೆಳವಣಿಗೆಯಲ್ಲಿ ನನ್ನ ಮಾರ್ಗದರ್ಶಕರಾದ ಸಮಾಜಮುಖಿ ಚಿಂತಕ ದಿ। ಕೀರ್ತಿಶೇಷ ಶ್ರೀನಿವಾಸ್ ಆಳ್ವರು, ಪ್ರಾಮಾಣಿಕತೆಯ ಆದರ್ಶದ ಇನ್ನೊಂದು ಮುಖದಂತಿದ್ದ ದಿ।ಕೆ.ಕೆ.ರೈ, ನಾಯಕತ್ವಕ್ಕೆ ಕೈಗನ್ನಡಿಯಾದ ದಿ।ಐ.ಎಂ.ಜಯರಾಮ ಶೆಟ್ಟಿ, ಮಾತೃ ಸಂಸ್ಕಾರದ ಮಮತಾಮಯಿ ದಿ। ಸುಶೀಲ. ಪಿ.ಶೆಟ್ಟಿ ಯವರ, ಸಮಾಜದ ಆಸ್ತಿ , ಕೊಡುಗೈ ದಾನಿ ದಿ। ಆರ್.ಎನ್.ಶೆಟ್ಟಿಯವರ ಹಿರಿತನದಲ್ಲಿ, ಸಾಮಾಜಿಕ ಕಳಕಳಿಯ ಕೊಡುಗೈದಾನಿ ಶ್ರೀ ಕೆ.ಪ್ರಕಾಶ್ ಶೆಟ್ಟಿಯವರ ಮಾರ್ಗ ದರ್ಶನದಲ್ಲಿ ಜವಾಬ್ದಾರಿ ನಿರ್ವಹಿಸಿರುವ ಅನುಭವ ನನ್ನದು.

ವಿಶೇಷವಾಗಿ ಸಂಘದ ಶಾಲಾ ಆಡಳಿತವನ್ನು ಅತ್ಯುತ್ಕೃಷ್ಟ ಮಟ್ಟದಲ್ಲಿ ನಡೆಸಿಕೊಂಡು ಬರುವಲ್ಲಿ ಶ್ರಮಿಸಿರುವುದು ಶಾಲೆಯ ಎಲ್ಲಾ ಪೋಷಕರಿಗೆ ತಿಳಿದಿರುವ ವಿಚಾರ. ಅದೇ ರೀತಿ ಮುಂದೆಯೂ ಸಂಘ ಹಾಗು ಸಮಾಜದ ಅಭ್ಯುದಯಕ್ಕಾಗಿ ಪ್ರಾಮಾಣಿಕತೆಯಿಂದ ಜವಾಬ್ದಾರಿ ನಿರ್ವಹಿಸುವ ಕಾಳಜಿ ನನ್ನದು.

ಈ ಸಂದರ್ಭದಲ್ಲಿ ತಮ್ಮೆಲ್ಲ ಹಿತೈಷಿ ಸದಸ್ಯ ಬಾಂಧವರ ಮಾರ್ಗದರ್ಶನ ಮತ್ತು ಬೆಂಬಲವನ್ನು ಅಪೇಕ್ಷಿಸುವ

| ಕ್ರ. ಸಂಖ್ಯೆ | ಅಭ್ಯರ್ಥಿಯ ಹೆಸರು | | |
|---|---|---|---|
| 2 | ಸಂತೋಷ್ ಶೆಟ್ಟಿ ಜೆ.<br>SANTHOSH SHETTY J |  | VOTE |

ತಮ್ಮ ವಿದೇಯ ಸೇವಾಕಾಂಕ್ಷಿ.
**ಸಂತೋಷ್ ಶೆಟ್ಟಿ ಜೆ.**

**Mob: 98458 96655 E-mail ; santhajshetty@gmail.com**

ADVT.


# ಬಂಟರ ಸಂಘ

## ಚುನಾವಣೆ

PLEASE SUPPORT
TEAM CA ASHOK SHETTY

### OFFICE BEARERS CANDIDATES

01



**PRESIDENT**

ಸಿಎ. ಅಶೋಕ್ ಶೆಟ್ಟಿ ಎಂ.

CA ASHOK SHETTY M.

02



**VICE PRESIDENT -1**

ಸಂತೋಷ್ ಶೆಟ್ಟಿ ಜೆ.

SANTHOSH SHETTY J.

02



**VICE PRESIDENT - LADY**

ಮಂಜುಳಾ ಶೆಟ್ಟಿ

MANJULA SHETTY

UNANIMOUSLY SELECTED



**HON. SECRETARY**

ವಿಜಯ್ ಜೆ. ಶೆಟ್ಟಿ ಹಾಲಾಡಿ

VIJAY J. SHETTY HALADI

UNANIMOUSLY SELECTED




**JOINT SECRETARY**

ಜಯಶ್ರೀ ಸಿ. ರೈ

JAYASHREE C. RAI

01



**TREASURER**

ಅಶೋಕ್ ಕುಮಾರ್ ಶೆಟ್ಟಿ ಎಚ್.

ASHOK KUMAR SHETTY H.

ADVT.

TEAM CA ASI


ಬೆಂಗಳೂರು
2024-26
28
JULY 2024
SUNDAY
EXECUTIVE COMMITTEE
01 ಅಜಿತ್ ಕುಮಾರ್ ಶೆಟ್ಟಿ ಕೆ.
AJITH KUMAR SHETTY K.
02 ಅಜಿತ್ ವಿ. ಶೆಟ್ಟಿ
AJITH V. SHETTY
03 ಅಣ್ಣಯ್ಯ ಶೆಟ್ಟಿ ಪಿ.
ANNAYYA SHETTY P.
07 ನಿರಂಜನ್ ಶೆಟ್ಟಿ ಕೆ.
NIRANJAN SHETTY K.
09 ಪ್ರಶಾಂತ್ ಶೆಟ್ಟಿ ಎಸ್.
PRASHANTH SHETTY S
11 ರಮೇಶ್ ಜಿ. ಶೆಟ್ಟಿ
RAMESH G. SHETTY
12 ರವೀಂದ್ರ ಶೆಟ್ಟಿ
RAVINDRA SHETTY
14 ಸಂತೋಷ್ ಕುಮಾರ್ ಶೆಟ್ಟಿ ಎಂ.
SANTHOSH KUMAR SHETTY M
15 ಶಕುಂತಲ ಶೆಟ್ಟಿ
SHAKUNTHALA SHETTY
16 ಶೋಭಾ ಶೇಖ
SHOBHA SHEKHA
17 ಸುನೀಲ್ ಕುಮಾರ್ ಶೆಟ್ಟಿ ಜೆ.
SUNIL KUMAR SHETTY J.
18 ಸುರೇಂದ್ರ ಶೆಟ್ಟಿ ಹೆಚ್.
SURENDRA SHETTY H.
19 ಉಮೇಶ್ ಡಿ. ಪೂಂಜ
UMESH D. PUNJA
20 ಉಮೇಶ್ ಕುಮಾರ್ ಶೆಟ್ಟಿ
UMESH KUMAR SHETTY
21 ಯೋಗ್ಯ ಎಲ್. ರೈ
YOGYA L. RAI
HOK SHETTY

ADVT.

# ಬಂಟರ ಸಂಘದ ಚುನಾವಣೆ 2024–2026

FOR THE POST OF
## VICE PRESIDENT - LADY

PLEASE SUPPORT TEAM CA ASHOK SHETTY

*Please Elect*
## MANJULA SHETTY
## ಮಂಜುಳಾ ಶೆಟ್ಟಿ



ಕ್ರಮ ಸಂಖ್ಯೆ : **02**

**ಆತ್ಮೀಯ ಬಂಧುಗಳೇ,**

ಇದೇ ಬರುವ ಜುಲೈ 28ರಂದು ಬಂಟರ ಸಂಘ ಬೆಂಗಳೂರು ಇದರ ಆಡಳಿತ ಮಂಡಳಿಯ ಚುನಾವಣೆ ಪ್ರಕ್ರಿಯೆ ನಡೆಯಲಿದೆ. ಈ ಪ್ರಯುಕ್ತ ಶ್ರೀಮತಿ.ಮಂಜುಳಾ ಶೆಟ್ಟಿ ಆದ ನಾನು ಮಹಿಳಾ ಉಪಾಧ್ಯಕ್ಷಳ ಹುದ್ದೆಗೆ ಸ್ಪರ್ಧಿಸುತ್ತಿದ್ದೇನೆ.

ನನ್ನ ತೀರ್ಥರೂಪರು ಕೀರ್ತಿ ಶೇಷ ಡಾ.ಎಂ.ತಿಮ್ಮಪ್ಪ ರೈ ಮಾಜಿ ಅಧ್ಯಕ್ಷರು, ಬಂಟರ ಸಂಘ, ಬೆಂಗಳೂರು. ನನ್ನ ಮಾತೃಶ್ರೀ ಅರಿಯಡ್ಕ ಜಯಂತಿ.ಟಿ.ರೈ, ಹಾಗೂ ನನ್ನ ಕೈ ಹಿಡಿದ ಪತಿ ಶ್ರೀ.ಕೆ.ಸಂತೋಷ್ ಕುಮಾರ್ ಶೆಟ್ಟಿ ವೃತ್ತಿಯಲ್ಲಿ ಇಂಜಿನಿಯರ್, ಮಗ ರತನ್ ಶೆಟ್ಟಿ, ಮಗಳು ರಮ್ಯಾ ಶೆಟ್ಟಿ ಅಳಿಯ ಪ್ರದೀಪ್ ಶೆಟ್ಟಿ ಇದು ನನ್ನ ಕುಟುಂಬದ ಪರಿಚಯ.

**ವಿದ್ಯಾರ್ಹತೆ**

ಪ್ರಾಥಮಿಕ ಶಿಕ್ಷಣ ನ್ಯಾಷನಲ್ ಪಬ್ಲಿಕ್ ಸ್ಕೂಲ್ ರಾಜಾಜಿನಗರ, ಬೆಂಗಳೂರು

**ಪದವಿಪೂರ್ವ ಶಿಕ್ಷಣ** : ವಿ.ವಿ.ಎಸ್ ಕಾಲೇಜ್, ಬೆಂಗಳೂರು

ಎಂ.ಕಾಂ ಬೆಂಗಳೂರು ವಿಶ್ವವಿದ್ಯಾಲಯ 5ನೇ ರ್ಯಾಂಕ್ ನೊಂದಿಗೆ ಚಿನ್ನದ ಪದಕ

**ಕ್ರೀಡಾ ಕ್ಷೇತ್ರ:** ತ್ರೋ ಬಾಲ್‌ನಲ್ಲಿ ಮೂರು ಬಾರಿ ಸತತವಾಗಿ ಕರ್ನಾಟಕವನ್ನು ಪ್ರತಿನಿಧಿಸಿ ಪ್ರಶಸ್ತಿ ಗಳಿಸಿರುವುದು

ವಿ.ವಿ.ಎಸ್ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯೆಯಾಗಿ 2016–19 ರವರೆಗೆ ಕಾರ್ಯ ನಿರ್ವಹಿಸಿದ್ದೇನೆ.

**ಬಂಟ್ಸ್ ಸಂಘದೊಂದಿಗೆ ನನ್ನ ಒಡನಾಟ**

2012 – 14 ರವರೆಗೆ ಕಾರ್ಯಕಾರಿ ಸಮಿತಿ ಸದಸ್ಯೆ, ಮಹಿಳಾ ವಿಭಾಗದ ಮುಖ್ಯಸ್ಥಳಾಗಿ ಮಹಿಳಾ ದಿನಾಚರಣೆಯ ಪ್ರಾರಂಭ ಮಾಡಿರುತ್ತೇನೆ ಅದು ಇಂದಿಗೂ ಮುಂದುವರೆಯುತ್ತಿದೆ. ಮಹಿಳೆಯರಿಗೆ ಹಲವಾರು ಚಿಂತನಶೀಲಾ ಕಾರ್ಯಕ್ರಮಗಳ ಸಂಯೋಜನೆ.

2014–16 ರಲ್ಲಿ ಜಂಟಿ ಕಾರ್ಯದರ್ಶಿ, ಈ ಸಂದರ್ಭದಲ್ಲಿ ಸ್ಮಾರ್ಟ್ ಕಾರ್ಡ್ ಹಾಗೂ ಸದಸ್ಯರ ಕೈಪಿಡಿಯನ್ನು ನನ್ನ ನೇತೃತ್ವದಲ್ಲಿ ಮುದ್ರಿಸಲಾಯಿತು.

2022–24 ರಲ್ಲಿ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಖರೀದಿ ಸಮಿತಿಯ ಮುಖ್ಯಸ್ಥೆಯಾಗಿ ಸೇವೆ

**ಸಮಾಜಮುಖಿ ಚಟುವಟಿಕೆಗಳು** : 2011 ರಿಂದ ವಿಜಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಿರ್ದೇಶಕಿಯಾಗಿ ಸೌಹಾರ್ದದ ಪ್ರಗತಿಯಲ್ಲಿ ಕೈ ಜೋಡಿಸಿರುತ್ತೇನೆ.

ಬುಕೆ ಲೇಡಿಸ್ ಕ್ಲಬ್‌ನಲ್ಲಿ ಕಾರ್ಯದರ್ಶಿ ಹಾಗೂ ಅಧ್ಯಕ್ಷೆಯಾಗಿ ಕ್ರಿಯಾಶೀಲ ಚಟುವಟಿಕೆಗಳಿಗೆ ಪ್ರೋತ್ಸಾಹ.

ನಾನು ಕಂಡ ಅನುಭವದಿಂದ ನನ್ನನ್ನು ಬಹುಮತಗಳಿಂದ ಮಹಿಳಾ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುವಿರೆಂದು ನಂಬಿದ್ದೇನೆ.

ಇಂತಿ ನಿಮ್ಮ ಸೇವಾಕಾಂಕ್ಷಿ

**ಮಂಜುಳಾ ಶೆಟ್ಟಿ**

Ph. : 9739068362

E-mail: manjulashetty@ymail.com

ADVT.

# ಬಂಟರ ಸಂಘ ಬೆಂಗಳೂರು – ಚುನಾವಣೆ

**2024–2026**

**28–07–2024ನೇ ಭಾನುವಾರ**

ಕ್ರ.ಸಂ **03**



## ರವಿರಾಜ್ ಎಸ್. ಶೆಟ್ಟಿ

M. No. : CL003800

**ಆತ್ಮೀಯ ಸದಸ್ಯ ಬಾಂಧವರೇ,**

ಇದೇ ತಿಂಗಳು 28ರ ಭಾನುವಾರ ನೆಡೆಯಲಿರುವ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಾನು **'ಖಜಾಂಚಿ'** ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು ತಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲನನ್ನಾಗಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಈ ಹಿಂದೆ 4 ಬಾರಿ (2001–04, 2006–08, 2008–10, 2012–14) ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಅತ್ಯಂತ ಪ್ರಾಮಾಣಿಕ ಹಾಗೂ ಬದ್ಧತೆಯಿಂದ ಕಾರ್ಯನಿರ್ವಹಿಸಿರುತ್ತೇನೆ.

ಹಲವು ಉಪಸಮಿತಿಗಳ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿರುವ ನಾನು 2001–04ರಲ್ಲಿ ಯುವ ವಿಭಾಗದ ಸಂಚಾಲಕನಾಗಿ **"ಶಿಕ್ಷಣ ಕ್ರಾಂತಿ ಯೋಜನೆಯಡಿ"** ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಸುಮಾರು 4000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೇನೆ.

ಸಾರ್ವಜನಿಕ ಸಂಪರ್ಕ ಸಮಿತಿಯ ಸಂಚಾಲಕನಾಗಿ ಪ್ರಥಮ ಬಾರಿಗೆ ಸದಸ್ಯರ ಭಾವಚಿತ್ರವುಳ್ಳ ಡೈರೆಕ್ಟರಿಯನ್ನು ಪ್ರಕಟಿಸುವಲ್ಲಿ ಮುತುವರ್ಜಿ ವಹಿಸಿದ್ದೇನೆ. 2006–08 ರಲ್ಲಿ ಸಂಘದ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆಯ ಚೇರ್‌ಮೆನ್ ಆಗಿ ಕೆಲಸ ನಿರ್ವಹಿಸಿದ್ದೇನೆ. 2012–14ರ ಸಾಲಿನಲ್ಲಿ ವಿದ್ಯಾರ್ಥಿವೇತನ ಸಮಿತಿಯ ಅಧ್ಯಕ್ಷನಾಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳ **'ದತ್ತು ಸ್ವೀಕಾರ'** ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಶ್ರಮಿಸಿದ್ದೇನೆ. 2014–16ರಲ್ಲಿ ಸಂಘದ ಮುಖವಾಣಿ **'ಸ್ನೇಹ ಚಿಂತನೆ'** ಪತ್ರಿಕೆಯ **ಗೌರವ ಸಂಪಾದಕ**ನಾಗಿ ಒಂದಷ್ಟು ಹೊಸತನವನ್ನು ನೀಡಿ ಪತ್ರಿಕೆಯ ಮೆರಗು ಹೆಚ್ಚಿಸಲು ಪ್ರಯತ್ನಿಸಿದ್ದೇನೆ ಅಲ್ಲದೆ **'ಇವರು ನಮ್ಮವರು'** ಮಾಲಿಕೆಯಲ್ಲಿ ಹಿರಿಯ ಬಂಟ ಸಾಧಕರನ್ನು ಯುವ ಜನಾಂಗಕ್ಕೆ ಪರಿಚಯಿಸುವಲ್ಲಿ ಯಶ ಕಂಡಿದ್ದೇನೆ.

ಕಳೆದ 2 ದಶಕಗಳಿಂದ ಸಂಘದ ಕಾರ್ಯಚಟುವಟಿಕೆಗಳಲ್ಲಿ ಸಕ್ರೀಯನಾಗಿ ತೊಡಗಿಸಿಕೊಂಡಿರುವ ನನ್ನ ಅನುಭವದ ಹಿನ್ನಲೆಯಲ್ಲಿ ಈ ಬಾರಿಯ ಚುನಾವಣೆಯಲ್ಲಿ **'ಖಜಾಂಚಿ'** ಸ್ಥಾನಕ್ಕೆ ಸ್ಪಧಿಸುತ್ತಿದ್ದು ತಾವು ಸಂಪೂರ್ಣ ಸಹಕಾರ ಬೆಂಬಲವನ್ನು ನೀಡಿ ನನ್ನನ್ನು ಜಯಶಾಲಿಯನ್ನಾಗಿ ಮಾಡಬೇಕಾಗಿ ವಿನಮ್ರವಾಗಿ ಪ್ರಾರ್ಥಿಸುತ್ತೇನೆ.

ಸುಮಾರು 18 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವುದರಿಂದ ಎಲ್ಲ ಸದಸ್ಯರನ್ನು ವೈಯಕ್ತಿಕವಾಗಿ ಸಂಪರ್ಕಿಸಲು ಕಷ್ಟಸಾಧ್ಯವಾದ್ದರಿಂದ ಇದನ್ನೇ ನನ್ನ ವೈಯಕ್ತಿಕ ಮನವಿಯೆಂದು ತಿಳಿದು, ನನ್ನನ್ನು ಬೆಂಬಲಿಸಬೇಕಾಗಿ ವಿನಂತಿಸುತ್ತೇನೆ.

2001–04
ಸಂಚಾಲಕ – **ಯುವ ವಿಭಾಗ**
ಸಂಚಾಲಕ – **ಸಮಾಜ ಸೇವಾ ವಿಭಾಗ**
ಸಂಚಾಲಕ – **ಸಾರ್ವಜನಿಕ ಸಂಪರ್ಕ ಸಮಿತಿ**
2008–10 – **ಅಧ್ಯಕ್ಷ, ಸಾಂಸ್ಕೃತಿಕ ಸಮಿತಿ**
2006–08 – **ಚೇರಮೆನ್, ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆ**
2012–14 – **ಅಧ್ಯಕ್ಷ, ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ**
2016–18 – **ಗೌರವ ಸಂಪಾದಕ – ಸ್ನೇಹ ಚಿಂತನೆ**
2006–11 – **ನಿರ್ದೇಶಕ, ವಿಜಯ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಲಿ.**
**ನಿಕಟಪೂರ್ವ ಅಧ್ಯಕ್ಷ, ಕನ್ನಡ ಕರಾವಳಿ ವೇದಿಕೆ.**

| ಕ್ರ. ಸಂಖ್ಯೆ | ಅಭ್ಯರ್ಥಿಯ ಹೆಸರು | | |
|---|---|---|---|
| 3 | ರವಿರಾಜ್ ಎಸ್. ಶೆಟ್ಟಿ<br>RAVIRAJ S. SHETTY |  | VOTE |

ಇಂತಿ ತಮ್ಮ ವಿಶ್ವಾಸಿ,

**ರವಿರಾಜ್ ಎಸ್. ಶೆಟ್ಟಿ**

**ಮೊ : 98453 71495**

ADVT.

# BUNTS' SANGHA BANGALORE

ELECTION 2024-2026 DATE: 28-07-2024



## ಸ್ಥಾನ : ಖಜಾಂಚಿ, ಕ್ರ.ಸಂ. : 04

## FOR THE POST OF TREASURER

## ಉಮೇಶ್ ರೈ .ಬಿ

## UMESH RAI .B

1985ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಕ್ರೀಡಾಕೂಟದ ಜೂನಿಯರ್ ವಿಭಾಗದಲ್ಲಿ ಪೋಲ್‌ವಾಲ್ಟ್‌ನಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಬೆಳ್ಳಿ ಪದಕ ತಂದ ಮೊಟ್ಟ ಮೊದಲ ಸ್ಪರ್ಧಿ. ಜಾವಲಿನ್ ತ್ರೋನಲ್ಲಿ ಬೆಳ್ಳಿ ಪದಕ, ಸತತ ಮೂರು ವರ್ಷ ಮಂಗಳೂರು ವಿಶ್ವವಿದ್ಯಾನಿಲಯದ ಕ್ರೀಡಾಕೂಟದ ಡೆಕತ್ಲಾನ್‌ನಲ್ಲಿ ಚಿನ್ನದ ಪದಕ ಪಡೆದು ಹ್ಯಾಟ್ರಿಕ್ ಸಾಧಿಸಿ ಅತ್ಯುತ್ತಮ ಕ್ರೀಡಾ ಪ್ರಶಸ್ತಿಯನ್ನು ಪಡೆದಿರುತ್ತೇನೆ. 110 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿ ಪದಕ, ಜಾವಲಿನ್ ತ್ರೋ ಮತ್ತು ಪೋಲ್‌ವಾಲ್ಟ್‌ನಲ್ಲಿ ಕಂಚಿನ ಪದಕ, ರಾಜ್ಯ ಮಟ್ಟದ ಸೀನಿಯರ್ ಕ್ರೀಡಾಕೂಟದ ಡೆಕತ್ಲಾನ್‌ನಲ್ಲಿ ಬೆಳ್ಳಿ ಪದಕ, ಸಿಕಿಂದ್ರಾಬಾದ್‌ನಲ್ಲಿ ನಡೆದ ದಕ್ಷಿಣ ಮಧ್ಯ ರೈಲ್ವೆಯ ಕ್ರೀಡಾಕೂಟದ ಡೆಕತ್ಲಾನ್‌ನಲ್ಲಿ ಚಿನ್ನದ ಪದಕ ಪಡೆದಿರುತ್ತೇನೆ. ಸಂತ ಫಿಲೋಮಿನ ಕಾಲೇಜು ಕಬ್ಬಡಿ ತಂದ ನಾಯಕನಾಗಿ ವಿಶ್ವ ವಿದ್ಯಾನಿಲಯದ ಕಬ್ಬಡಿ ಪಂದ್ಯದಲ್ಲಿ ಬೆಳ್ಳಿ ಪದಕ ಪಡೆದಿರುತ್ತೇನೆ. ಮಂಗಳೂರು ವಿಶ್ವವಿದ್ಯಾನಿಲಯವನ್ನು ಆಲ್‌ಇಂಡಿಯಾ ಇಂಟರ್ ಯೂನಿವರ್‌ಸಿಟಿಗೆ ಭಾಗವಹಿಸಿರುತ್ತೇನೆ. ಕಳೆದ 20 ವರ್ಷಗಳಲ್ಲಿ ಸಂಘದ ಕ್ರೀಡಾ ಸಮಿತಿ ಅಧ್ಯಕ್ಷನಾಗಿ, ಸುಮಾರು 4 ಸಮಿತಿಗಳಲ್ಲಿ ಸಂಚಾಲಕರನಾಗಿ, ಸಹ ಸದಸ್ಯನಾಗಿ ಕೆಲಸ ಮಾಡಿರುತ್ತೇನೆ. ಸಾಂಸ್ಕೃತಿಕ - ರಂಗಭೂಮಿ ಕಲಾವಿದನಾಗಿ, ಕಿರುನಾಟಕಗಳನ್ನು ರಚಿಸಿ, ನಿರ್ದೇಶಿಸಿ, ಅಭಿನಯಿಸಿ, ಸಂಘದ ಸದಸ್ಯರ ಮೆಚ್ಚುಗೆಗೆ ಪಾತ್ರನಾಗಿರುತ್ತೇನೆ. ಸಕ್ರಿಯವಾಗಿ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಈ ಬಾರಿಯ ಚುನಾವಣೆಯಲ್ಲಿ "ಖಜಾಂಚಿ" ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ. ಜವಾಬ್ದಾರಿಯುತ ಸಂಘದ ಸದಸ್ಯರಲ್ಲಿ ಕಳಕಳಿಯ ಮನವಿ. ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಆಶೀರ್ವದಿಸಿ ಮತ್ತು ಸಹಕರಿಸಿ ಜಯಶೀಲರನ್ನಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇಂತಿ

ಉಮೇಶ್ ರೈ .ಬಿ, 9035899044

ADVT.

# ಬಂಟರ ಸಂಘ ಬೆಂಗಳೂರು ಚುನಾವಣೆ - 2024 - 26

PLEASE SUPPORT TEAM CA ASHOK SHETTY



ಕ್ರಮ ಸಂಖ್ಯೆ **1**

## ಅಜಿತ್‌ಕುಮಾರ್ ಶೆಟ್ಟಿ. ಕೆ.

ಸದಸ್ಯತ್ವ ಸಂಖ್ಯೆ : CL006510

**ಆತ್ಮೀಯ ಬಂಟ ಬಾಂಧವರೇ,**

ನಾನು ದಿನಾಂಕ : 28.07.2024 ರಂದು ನಡೆಯಲಿರುವ ಬಂಟರ ಸಂಘದ ಚುನಾವಣೆಯಲ್ಲಿ "ಕಾರ್ಯಕಾರಿ ಸಮಿತಿ ಸದಸ್ಯ" (Executive Committee Member) ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ.

